ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

ಮಾಸಪತ್ರಿಕೆ
ಸಂಪುಟ 3, ಸಂಚಿಕೆ 8, ಜೂನ್ 2025

SHRIDEVI ANTARANGA
Monthly Magazine

SHRIDEVI EDUCATION




ಸಂಪಾದಕರು: ಡಾ. ಎಂ.ಆರ್. ಹುಲಿನಾಯ್ಕರ್   ಗೌರವ ಸಂಪಾದಕರು: ಡಾ. ಕೆ.ಆರ್.ಕಮಲೇಶ್   ಕಾರ್ಯನಿರ್ವಾಹಕ ಸಂಪಾದಕರು: ಡಾ. ರಮಣ ಎಂ. ಹುಲಿನಾಯ್ಕರ್   ಇಂಗ್ಲಿಷ್ ಆವೃತ್ತಿ ಸಂಪಾದಕರು: ಕೃಷ್ಣ ವಿ.



ಸಂಪಾದಕರ ಅಂತರಂಗ

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

## ಭಾರತದ ಸಕರಾತ್ಮಕ ಆರ್ಥಿಕ ಪ್ರಗತಿ



ಕಳೆದ ಒಂದು ದಶಕದಲ್ಲಿ, ಭಾರತದ ಆರ್ಥಿಕತೆಯಲ್ಲಿ ಅದ್ಭುತ ಬೆಳವಣಿಗೆ ಆಗಿರುವುದನ್ನು ನಾವು ಕಾಣುತ್ತಿದ್ದೇವೆ. 2015ರಲ್ಲಿ 2.1 ಟ್ರಿಲಿಯನ್ ಡಾಲರ್‌ಗಳಷ್ಟು ಇದ್ದ ದೇಶದ ಒಟ್ಟು ಆಂತರಿಕ ಉತ್ಪನ್ನವು (GDP) 2025 ರವೇಳೆಗೆ 4.3 ಟ್ರಿಲಿಯನ್ ಡಾಲರ್‌ಗಳಿಗೆ ತಲುಪಿದೆ. ಈ ಅದ್ಭುತವಾದ ಬೆಳವಣಿಗೆಯು ಜಾಗತಿಕ ಮಟ್ಟದಲ್ಲಿ ಜಪಾನ್ ದೇಶವನ್ನು ಹಿಂದಿಕ್ಕಿ ಭಾರತವನ್ನು ನಾಲ್ಕನೆಯ ಸ್ಥಾನಕ್ಕೆ ಏರಿಸಿದೆ. ಗಮನಾರ್ಹವಾದ ಈ ಪ್ರಗತಿಗೆ ದೇಶದ ಉತ್ಪಾದನೆಯ ವ್ಯವಸ್ಥೆಯಲ್ಲಿ ಮಾಡಿದ ರಾಚನಿಕ ಸುಧಾರಣೆಗಳು, ಜನಸಂಖ್ಯೆಯಲ್ಲಿರುವ ಯುವಕರ ಪ್ರಮಾಣ, ತಂತ್ರಜ್ಞಾನದಲ್ಲಿ ಆಗಿರುವ ಪ್ರಗತಿ, ಮತ್ತು ದೇಶದಲ್ಲಿನ ಉತ್ಪಾದಿತ ವಸ್ತುಗಳ ಆಂತರಿಕ ಬಳಕೆಯಲ್ಲಿ ಆಗಿರುವ ಹೆಚ್ಚಳ ಇವು ಕಾರಣಗಳಾಗಿವೆ.

### ಸದೃಢವಾದ ಬೆಳವಣಿಗೆ

ಭಾರತದ ಒಟ್ಟು ಆಂತರಿಕ ಉತ್ಪನ್ನವು ಕಳೆದ ಹತ್ತು ವರ್ಷಗಳಲ್ಲಿ ದುಪ್ಪಟ್ಟಾಗಿದೆ ಎಂದು ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಯ ವರದಿಯು (IMF) ಹೇಳುತ್ತದೆ. ಐ.ಎಮ್.ಎಫ್. ಅಭಿಪ್ರಾಯದಂತೆ ಭಾರತವು ತನ್ನ ಆದ್ಯತೆಗಳನ್ನು ಸರಿಯಾಗಿ ಗುರುತಿಸಿದುದರಿಂದ ಅದು ತನ್ನ ಆರ್ಥಿಕತೆಯನ್ನು ಬಲವಾದ ಹಾಗೂ ಸುಸ್ಥಿರವಾದ ಸ್ಥಾನಕ್ಕೆ ಏರಿಸಿಕೊಳ್ಳಲು ಸಹಾಯವಾಯಿತು. ಈ ವರ್ಷದ ಜಿಡಿಪಿಯ ಬೆಳವಣಿಗೆಯ ದರವು ಶೇ 6.5ರಷ್ಟು ಇರಲಿದೆ ಎಂಬ ಅಂದಾಜನ್ನೂ ಐಎಮ್‌ಎಫ್ ತಿಳಿಸಿದೆ.  ವಿಶ್ವದ ಮಟ್ಟದಲ್ಲಿ ಬೆಲೆ ಏರಿಕೆಯು ತಾಂಡವವಾಡುತ್ತಿದ್ದರೂ ನಮ್ಮ ದೇಶದಲ್ಲಿ ಚಿಲ್ಲರೆ ವ್ಯಾಪಾರದ ಮಟ್ಟದಲ್ಲಿನ ಬೆಲೆ ಏರಿಕೆಯ ದರವನ್ನು ಫೆಬ್ರವರಿ 2025ರ ವೇಳೆಗೆ ಕೇಂದ್ರ ಸರ್ಕಾರವು ತನ್ನ ಕಠಿಣ ಕ್ರಮಗಳ ಮೂಲಕ ಶೇ. 3.61ರಷ್ಟಕ್ಕೆ ನಿಯಂತ್ರಿಸಲು ಸಾಧ್ಯವಾದುದೂ ಈ ಸಾಧನೆಗೆ ಒಂದು ಮಹತ್ವದ ಕಾರಣವಾಗಿದೆ.

### ಜನಸಂಖ್ಯೆಯಲ್ಲಿ ಯುವ ಜನಾಂಗದ ಪ್ರಮಾಣ

ಭಾರತದ ಅತ್ಯಮೂಲ್ಯವಾದ ಆಸ್ತಿಯೆಂದರೆ ಅದರ ಜನಸಂಖ್ಯೆಯಲ್ಲಿರುವ ಯುವಜನತೆಯ ಪ್ರಮಾಣ. ಇಂದು, ದೇಶದ ಜನಸಂಖ್ಯೆಯಲ್ಲಿ ಯುವಜನತೆಯ ಪ್ರಮಾಣ ಶೇಕಡ 29ರ ಸುಮಾರಿನಲ್ಲಿದೆ.  ಅಂದರೆ ಭಾರತವು ದುಡಿಯುವ ಯುವಜನತೆಯನ್ನು ಸಮೃದ್ಧವಾಗಿ ಹೊಂದಿದೆ. ಇದರಿಂದ ಉತ್ಪಾದನೆಯ ಪ್ರಮಾಣ ಹಾಗೂ ಉತ್ಪಾದನೆಗಳ ಆಂತರಿಕ ಬಳಕೆಯ ಪ್ರಮಾಣ ಹೆಚ್ಚಾಗಿದೆ.

▸▸ 2ನೇ ಪುಟಕ್ಕೆ...

# ಹನ್ನೊಂದು ವರ್ಷದ ಪ್ರಗತಿಯ ಹೆಜ್ಜೆ ಸಮೃದ್ಧಿಯೆಡೆಗೆ ಭಾರತ

▪ ಅಂಬಿಕಾ ಹುಲಿನಾಯ್ಕರ್



ಹಣಕಾಸು
ನಿಯಂತ್ರಣಾಧಿಕಾರಿ
ಶ್ರೀದೇವಿ ಸಮೂಹ
ಶಿಕ್ಷಣ ಸಂಸ್ಥೆ

ದಶಕದ ಹಿಂದೆ ಭಾರತದಲ್ಲಿ ಬಡತನ, ಅನಾರೋಗ್ಯ ಮತ್ತು ದೇಶದ ಬಗ್ಗೆ ಕೀಳರಿಮೆ ಎನ್ನುವುದು ಸಾಮಾನ್ಯ ಎನ್ನುವಂತೆ ಇತ್ತು. ಇದನ್ನು ಹೋಗಲಾಡಿಸಲು ದೃಢಪ್ರಯತ್ನಗಳು ನಡೆದಿರಲಿಲ್ಲ. ಹೀಗಾಗಿ ಭಾರತವು 'ಮಲಗಿದ ಆನೆ' (Sleeping Elephant) ಎಂದೆನಿಸಿತ್ತು. ಈಗ ಕಾಲ ಬದಲಾಗಿದೆ. ಈಗ ದೇಶವು ಮೋದಿ ಯುಗದಲ್ಲಿದೆ. ಕಳೆದ ಹನ್ನೊಂದು ವರ್ಷದಲ್ಲಿ ಭಾರತವು ಎಲ್ಲ ರಂಗಗಳಲ್ಲಿ ದಾಪುಗಾಲಿನ ಸಾಧನೆ ಮಾಡಿ ಜಗತ್ತು ನಮ್ಮನ್ನು ಗುರುತಿಸಿ, ಗಮನಿಸಿ 'ಗರ್ಜಿಸುವ ಹುಲಿ' ಎಂದು ಬಣ್ಣಿಸುತ್ತಿದೆ.

ಮಾಜಿ ಪ್ರಧಾನಿ ಅಟಲ್‌ಬಿಹಾರಿ ವಾಜಪೇಯಿ ಅವರು ಹಾಕಿಕೊಟ್ಟ ಪ್ರಗತಿಯ ಹೆಜ್ಜೆಯನ್ನು





ಅನುಸರಿಸಿಕೊಂಡು ಹೊರಟಿರುವ ಇಂದಿನ ನಮ್ಮ ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಹನ್ನೊಂದು ವರ್ಷದ ಆಡಳಿತವನ್ನು ಪೂರೈಸುತ್ತಾ ದೇಶವನ್ನು ಸಮೃದ್ಧಿಯ ಕಡೆಗೆ ತೆಗೆದುಕೊಂಡು ಹೊರಟಿದ್ದಾರೆ.

ನಮ್ಮ ಪ್ರಧಾನಿ 'ಜಗತ್ತು ಕಂಡ ಅತ್ಯಂತ ಶ್ರಮಜೀವಿ ನಾಯಕ' ಎನ್ನುವ ಬಿರುದು ಗಳಿಸಿದ್ದಾರೆ. ಅವರು ಸದಾ ಚಟುವಟಿಕೆಯಲ್ಲಿರುತ್ತಾರೆ. ಪ್ರಧಾನಿಗಳು 2025ರ ಜೂನ್‌ವರೆಗೆ 4,314 ದಿನಗಳಲ್ಲಿ ನಿತ್ಯ 17 ಗಂಟೆಗಳ ಕಾಲ ಕಾರ್ಯನಿರ್ವಹಿಸುತ್ತಿದ್ದಾರೆ.

ಈ ಅವಧಿಯಲ್ಲಿ ಅವರು ಒಂದು ದಿನವು ರಜೆ ತೆಗೆದುಕೊಂಡಿಲ್ಲ ಎನ್ನುವುದನ್ನು ಮರೆಯಬಾರದು. ಅಂದರೆ ಸರಿಸುಮಾರು 73,338 ದೀರ್ಘ ಮಾನವ ಗಂಟೆಗಳ ಕಾಲ ಅವರು ಕೆಲಸ ಮಾಡಿದ್ದಾರೆ. ಈ ಪ್ರಮಾಣದಲ್ಲಿ ಕೆಲಸ ಮಾಡಲು ಸಾಮಾನ್ಯವಾಗಿ ಇತರರಿಗೆ ಸಾಧ್ಯವಿಲ್ಲ. ಸಾಮಾನ್ಯವಾಗಿ ಒಬ್ಬ ಐ.ಟಿ ಉದ್ಯೋಗಿ ದಿನಕ್ಕೆ ಎಂಟು ಗಂಟೆಯಂತೆ ವರ್ಷಕ್ಕೆ 235 ದಿನ ಕೆಲಸ ಮಾಡುತ್ತಾನೆ. ಪ್ರಧಾನಿಯವರ ಹನ್ನೊಂದು ವರ್ಷದ ಅವಧಿಯನ್ನು ಈ ರೀತಿ ಲೆಕ್ಕಾಚಾರ ಮಾಡಿದರೆ ಐ.ಟಿ. ಉದ್ಯೋಗಿಯೊಬ್ಬರು 37 ವರ್ಷ ಕೆಲಸ ಮಾಡಿದ್ದಾರೆಂದು ಹೇಳಬಹುದು.

### ದೂರದೃಷ್ಟಿಯ ನಾಯಕ

ಪ್ರಧಾನಿಗಳು ದೇಶಕ್ಕಾಗಿ ನಿರಂತರವಾಗಿ ದುಡಿಯುತ್ತಿದಾರೆ, ದೇಶದ ಅಭಿವೃದ್ಧಿಯನ್ನು ಕುರಿತು ಆಲೋಚನೆ ಮಾಡುತ್ತಿದ್ದಾರೆ ಎನ್ನುವ ಕಾರಣಕ್ಕಾಗಿ ಭಾರತ ಈಗ ವಿಕಾಸಗೊಳ್ಳುತ್ತಿರುವ ದೇಶ ಎನಿಸಿಕೊಳ್ಳುತ್ತಿದೆ. ದೇಶದ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವವನ್ನು ಆಚರಿಸುವ ಅದೃಷ್ಟ ಪ್ರಧಾನಿ ಅವರಿಗೆ ದೊರಕಿದ್ದು, ಸ್ವಾತಂತ್ರ ಗಳಿಕೆಯ ಶತಮಾನೋತ್ಸವದ ವೇಳೆಗೆ ದೇಶವು ಅಭಿವೃದ್ಧಿಯು ಯಾವ ಹಂತವನ್ನು ತಲುಪಿರಬೇಕೆಂಬ ಕನಸನ್ನು ಅವರು ಕಂಡಿದ್ದಾರೆ.

'ಉಜ್ವಲ ಕನಸನ್ನು ಕಾಣದೆ ಅಭಿವೃದ್ಧಿ ಹೊಂದಿದ ದೇಶವನ್ನು ಕಟ್ಟಲು ಸಾಧ್ಯವಿಲ್ಲ' ಎಂದು ನಂಬಿರುವವರು ಪ್ರಧಾನಿ ಮೋದೀಜಿ ಅವರು ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ದೇಶವನ್ನು ಉದ್ದೇಶಿಸಿ ಕೆಂಪುಕೋಟೆ ಯಿಂದ ಮಾತನಾಡುವಾಗ 'ಯಹಿ ಸಮಯ್ ಹೈ, ಸಹಿ ಸಮಯ್ ಹೈ' (ಈ ಸಮಯವೇ ಸರಿಯಾದ ಸಮಯ) ಎಂದು  ಕರೆಕೊಟ್ಟು, ಅದಕ್ಕೆ ತಕ್ಕಂತೆ ಇಡೀ ದೇಶದ ಸರ್ವಾಂಗೀಣ ಅಭಿವೃದ್ಧಿಯ ನೀಲನಕಾಶೆಯನ್ನು ಜನತೆಯ ಮುಂದಿರಿಸಿದ್ದರು. ಅವರ ನಿರಂತರ ಪ್ರಯತ್ನದ ಫಲವಾಗಿ ಇಂದು ಭಾರತ ಜಗತ್ತಿನ ನಾಲ್ಕನೇ ಅತಿ ದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದೆ.

▸▸ 4ನೇ ಪುಟಕ್ಕೆ...

## ಡಾ.ಹುಲಿನಾಯ್ಕರ್ ಕೊರಳಿಗೆ ಎಚ್.ಡಿ.ದೇವೇಗೌಡ ಪ್ರಶಸ್ತಿ ಗರಿ..



ವೈದ್ಯಕೀಯ, ಶಿಕ್ಷಣ ಮತ್ತು ರಾಜಕಾರಣ ಸೇರಿದಂತೆ ವಿವಿಧ ರಂಗಗಳಲ್ಲಿ  50 ವರ್ಷಗಳಿಂದ ದಣಿವರಿಯದೇ ಸಾರ್ವಜನಿಕ ಸೇವೆಯಲ್ಲಿ ತೊಡಗಿರುವ ತುಮಕೂರಿನ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ. ಎಂ.ಆರ್. ಹುಲಿ ನಾಯ್ಕರ್  ಸಾಧನೆ, ಸೇವೆಗೆ ಈಗ ಮತ್ತೊಂದು ಗರಿ.

ಮಾಜಿ ಪ್ರಧಾನಿ, ಮಣ್ಣಿನ ಮಗ ಎಚ್. ಡಿ. ದೇವೇಗೌಡ ಪ್ರಶಸ್ತಿ ಸಂದಿದೆ, ದೇವೇಗೌಡರು 93 ವಸಂತ ಪೂರೈಸಿದ ಸಂದರ್ಭ, ಸವಿ ನೆನಪಿಗಾಗಿ ಜೂನ್ 22 ರಂದು ಬೆಂಗಳೂರಿನಲ್ಲಿ ವಿವಿಧ ಧಾರ್ಮಿಕ ಮುಖಂಡರು, ಸಾಧಕರು, ಗಣ್ಯರು ಮತ್ತು ಅಭಿಮಾನಿಗಳ ಸಮ್ಮುಖದಲ್ಲಿ ಈ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

▸▸ 4ನೇ ಪುಟಕ್ಕೆ...

# ಭಾರತದ ಸಕರಾತ್ಮಕ ಆರ್ಥಿಕ ಪ್ರಗತಿ

▸▸ ಮೊದಲನೇ ಪುಟದಿಂದ

### ಉತ್ಪಾದನೆಯ ವ್ಯವಸ್ಥೆಯಲ್ಲಿನ ರಾಚನಿಕ ಸುಧಾರಣೆಗಳು

ಉತ್ಪಾದನೆ ಹಾಗೂ ವ್ಯಾಪಾರ ವ್ಯವಹಾರಗಳನ್ನು ಸುಗಮವಾಗಿ ನಡೆಸಲು ಅನುಕೂಲ ಮಾಡಿಕೊಡುವ ಉದ್ದೇಶದಿಂದ ಸರಕು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು (ಜಿಎಸ್‌ಟಿ) ದೇಶದಾದ್ಯಂತ ಏಕರೂಪವಾಗಿ ಜಾರಿಗೊಳಿಸಲಾಯಿತು. ಇದರ ಜೊತೆಗೆ ಎಲ್ಲ ಬಗೆಯ ವ್ಯವಹಾರದಲ್ಲಿಯೂ ಹಣದ ವಹಿವಾಟನ್ನು ಯೂನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್ (ಯುಪಿಐ) ಮೂಲಕ ಸುಲಭವಾಗಿ ನಡೆಸುವಂತೆ ಮಾಡಿದುದು ದೊಡ್ಡಕ್ರಾಂತಿಯನ್ನೇ ಉಂಟುಮಾಡಿತು ಹಾಗೂ ಹಣದ ವ್ಯವಹಾರದಲ್ಲಿ ಪಾರದರ್ಶಕತೆಯನ್ನು ತಂದಿತು. ಇಂದು ಹಣಕಾಸಿನ ಡಿಜಿಟಲ್ ವಹಿವಾಟಿನಲ್ಲಿ ಭಾರತವು ವಿಶ್ವದಲ್ಲಿಯೇ ಅಗ್ರಸ್ಥಾನವನ್ನು ಪಡೆದಿದೆ.

### ಸೇವಾವಲಯದ ಪ್ರಾಬಲ್ಯ

ಭಾರತದ ಸೇವಾವಲಯವು, ಅದರಲ್ಲಿಯೂ ವಿಶೇಷವಾಗಿ ಮಾಹಿತಿ ತಂತ್ರಜ್ಞಾನ (IT) ಮತ್ತು ವ್ಯವಹಾರ ಪ್ರಕ್ರಿಯೆಯ ನಿರ್ವಹಣೆ (BPM) ಜಾಗತಿಕವಾಗಿ ತನ್ನ ಪ್ರಾಬಲ್ಯವನ್ನು ಮೆರೆಯುತ್ತಿದೆ. ಈ ವಲಯವು ದೇಶದ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.  ಮೇಲೆ ಹೇಳಿದ ಎರಡು ಕ್ಷೇತ್ರಗಳ ಒಟ್ಟು ಆದಾಯವು 2023ನೆಯ ಆರ್ಥಿಕ ವರ್ಷದಲ್ಲಿ ತನ್ನ ರಫ್ತು ಆದಾಯವಾದ




194 ಬಿಲಿಯನ್ ಡಾಲರ್‌ಗಳನ್ನೂ ಸೇರಿದಂತೆ ಒಟ್ಟು 245 ಬಿಲಿಯನ್ ಡಾಲರ್‌ಗಳಷ್ಟಿದ್ದಿತು. ಅಲ್ಲದೆ ಈ ವಲಯವು 5.4 ದಶಲಕ್ಷಕ್ಕೂ ಹೆಚ್ಚಿನ ವೃತ್ತಿಪರರಿಗೆ ಉದ್ಯೋಗವನ್ನು ಒದಗಿಸುತ್ತಿದೆ. ಹೊಸದಾಗಿ ವಿವಿಧ ಕ್ಷೇತ್ರಗಳತ್ತ ಮುನ್ನುಗ್ಗುತ್ತಿರುವ ಸೇವಾವಲಯವು ರಾಷ್ಟ್ರದ ಜಿಡಿಪಿಯ ಪ್ರಗತಿಗೆ ಅಪಾರವಾದ ಕೊಡುಗೆಯನ್ನು ನೀಡುತ್ತಿದೆ.

### 'ಭಾರತದಲ್ಲಿ ತಯಾರಿಸಿ' (Make in India) ಉಪಕ್ರಮದ ಕೊಡುಗೆ

ದೇಶದಲ್ಲಿನ ಉತ್ಪಾದನೆಗೆ ಉತ್ತೇಜನವನ್ನು ನೀಡಲು ಮತ್ತು ಭಾರತವನ್ನು ಜಾಗತಿಕವಾಗಿ ಒಂದು ದೊಡ್ಡ ಉತ್ಪಾದನಾ ಕೇಂದ್ರವನ್ನಾಗಿ ಮಾಡಿ ಇತರ ದೇಶಗಳನ್ನು ಇತ್ತ ಆಕರ್ಷಿಸಲು 2014ರಲ್ಲಿ 'ಭಾರತದಲ್ಲಿಯೇ ತಯಾರಿಸಿ' ಎಂಬ ಉಪಕ್ರಮವನ್ನು ಪ್ರಾರಂಭಿಸಲಾಯಿತು. ಇದರಿಂದಾಗಿ, ಭಾರತೀಯ ಉತ್ಪಾದಕರಲ್ಲಿ ಹಿಂದೆ ಇದ್ದ ಮನಃಸ್ಥಿತಿಯನ್ನು ಬದಲಾಯಿಸಿ ಅದನ್ನು ವಿಶ್ವ ಮಾರುಕಟ್ಟೆಯತ್ತ ತಿರುಗಿಸಿ ಹಲವಾರು ವಲಯಗಳಲ್ಲಿ ಅಭೂತಪೂರ್ವವಾದ ಪ್ರಗತಿಯನ್ನು ದೇಶದಲ್ಲಿ ಸಾಧಿಸಲಾಗಿದೆ. ಈ ಉಪಕ್ರಮದಿಂದ 27 ವಲಯಗಳು ಅತ್ಯುತ್ತಮ ಸಾಧನೆಯನ್ನು ಮಾಡಿವೆ.  ಸೇವಾವಲಯ, ಮೋಟಾರು ವಾಹನಗಳ ವಲಯ ಹಾಗೂ ರಕ್ಷಣಾ ಸಾಧನಗಳ ಉತ್ಪಾದನಾ ವಲಯದಲ್ಲಿನ ಸಾಧನೆಗಳು ಅತ್ಯಂತ ಶ್ಲಾಘನೀಯವಾಗಿವೆ. ಇಂದು ಭಾರತವು ಮೋಟಾರು ವಾಹನಗಳ ಮೂರನೆಯ ಅತಿದೊಡ್ಡ ಮಾರುಕಟ್ಟೆಯಾಗಿದೆ.

ಮಹತ್ತರವಾದ ಉದ್ದೇಶದಿಂದ ಈ ಉಪಕ್ರಮವು 2014ರಲ್ಲಿ 45.15 ಬಿಲಿಯನ್ ಡಾಲರ್‌ಗಳಷ್ಟು ಇದ್ದ ವಾರ್ಷಿಕ ವಿದೇಶೀ ನೇರ ಹೂಡಿಕೆಯನ್ನು 2021–22ರ ವರ್ಷದಲ್ಲಿ 83.6 ಬಿಲಿಯನ್ ಡಾಲರ್‌ಗಳ ಮಟ್ಟಕ್ಕೆ ಏರಿಸಿತು. 2021–22ರಲ್ಲಿ ಬಂದಿರುವ ಈ ವಿದೇಶೀ ಹೂಡಿಕೆಯ ಪ್ರಮಾಣವು ಅಲ್ಲಿಯ ಹಿಂದಿನ ವರ್ಷಗಳ ವಾರ್ಷಿಕ ಮೊತ್ತಕ್ಕೆ ಹೋಲಿಸಿದರೆ ದಾಖಲೆಯ ಮೊತ್ತವಾಗಿದೆ. ವಾಣಿಜ್ಯಖಾತೆಯಿಂದ ನೀಡಲ್ಪಟ್ಟಿರುವ ಮಾಹಿತಿಯ ಪ್ರಕಾರ, ಹಾಲಿ ವರ್ಷದಲ್ಲಿ 100 ಬಿಲಿಯನ್ ಡಾಲರ್‌ಗಳಷ್ಟು ಹೂಡಿಕೆಯನ್ನು ಆಕರ್ಷಿಸಲು ಭಾರತವು ಸಜ್ಜಾಗಿದೆ.

### ಉತ್ಪಾದನಾ ವೆಚ್ಚದಲ್ಲಿ ಚೀನಾವನ್ನು ಹಿಂದಿಕ್ಕಿದ ಭಾರತ

ಭಾರತೀಯರಿಗೆ ದೊರೆತಿರುವ ಮತ್ತೊಂದು ಸಿಹಿಯಾದ ಸುದ್ದಿ ಇದು. ಈ ಬೆಳವಣಿಗೆಯು 'ಭಾರತದಲ್ಲಿಯೇ ತಯಾರಿಸಿ' ಉಪಕ್ರಮಕ್ಕೆ ವರದಾನವಾಗಲಿದೆ ಮತ್ತು ಜಗತ್ತಿನ ವಿವಿಧ ದೇಶಗಳು ಭಾರತದಲ್ಲಿ ಉತ್ಪಾದನೆಯನ್ನು ಪ್ರಾರಂಭಿಸಲು ಮತ್ತಷ್ಟು ಉತ್ತೇಜನವನ್ನು ನೀಡಿ ಮುಂದಿನ ದಿನಗಳಲ್ಲಿ ಭಾರತದ ಉತ್ಪಾದನಾ ಕ್ಷೇತ್ರವು ಜಗತ್ತಿನಲ್ಲಿ ವಿಜೃಂಭಿಸುವಂತೆ ಮಾಡುತ್ತದೆ.

ಭಾರತದಲ್ಲಿ ಉತ್ಪಾದನಾ ವೆಚ್ಚವು ಬಹಳ ಕಡಮೆಯಾಗಿದೆ, ಇದಕ್ಕೆ ಕಾರಣ ಕಾರ್ಮಿಕ ವೇತನವು ಚೀನಾದಲ್ಲಿ ನೀಡುತ್ತಿರುವ ಸರಾಸರಿ ವೇತನಕ್ಕಿಂತ ಕಡಮೆ, ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ಸರ್ಕಾರದ ಹೂಡಿಕೆದಾರ–ಸ್ನೇಹಿ ನೀತಿಗಳು, ಇತ್ಯಾದಿ.  ಚೀನಾ ದೇಶವು ಅನುಸರಿಸುತ್ತಿರುವ ಆಕ್ರಮಣಶೀಲ ನೀತಿ, ವ್ಯಾಪಾರ ಮತ್ತು ಪರದೇಶಗಳ ಮೇಲೆ ತನ್ನ ಪ್ರಭಾವವನ್ನು ಬೀರಿ ಅವುಗಳನ್ನು ತನ್ನ ಅಧೀನದಲ್ಲಿ ಇಟ್ಟುಕೊಳ್ಳಬೇಕೆಂಬ ಅದರ ಉದ್ದೇಶ, ಇವುಗಳಿಂದಾಗಿ ಜಗತ್ತಿನ ಹಲವು ಪ್ರಬಲ ದೇಶಗಳಾದ ಅಮೆರಿಕಾ ಸಂಯುಕ್ತ ಸಂಸ್ಥಾನ, ಆಸ್ಟ್ರೇಲಿಯಾ, ಯೂರೋಪಿಯನ್ ಯೂನಿಯನ್ ಮೊದಲಾದವುಗಳೊಡನೆ ತನ್ನ ಸಂಬಂಧವು ವಿಷಮಿಸುವಂತೆ ಮಾಡಿಕೊಂಡಿದೆ.  ಇದಕ್ಕೆ ಪ್ರತಿಯಾಗಿ ಭಾರತವು ಹೆಚ್ಚು ಕಡಮೆ ಎಲ್ಲ ದೇಶಗಳೊಂದಿಗೂ ಸುಮಧುರ ಬಾಂಧವ್ಯವನ್ನು ಹೊಂದಿದೆ. ಈ ಕಾರಣಗಳು ಈ ದೇಶಗಳು ಚೀನಾಕ್ಕೆ ಬದಲಾಗಿ ಭಾರತವನ್ನು ತಮ್ಮ ಉತ್ಪಾದನಾ ಪ್ರಕ್ರಿಯೆಯಲ್ಲಿ ಪಾಲುದಾರವನ್ನಾಗಿಸಿಕೊಳ್ಳಲು ಬಯಸುವ ಹಾಗೆ ಮಾಡಿವೆ. ಈ ಎಲ್ಲಾ ಕಾರಣದಿಂದಾಗಿ ಭಾರತವು ಚೀನಾ ದೇಶವನ್ನು ಹಿಂದಿಕ್ಕಿ, ವಿಶ್ವದಲ್ಲಿ ಅಗ್ರಮಾನ್ಯ ಉತ್ಪಾದನಾ ಕೇಂದ್ರವಾಗಿದೆ, ಇವುಗಳನ್ನು ಸ್ವಲ್ಪ ವಿಶದವಾಗಿ ನೋಡಬಹುದು:

### ಕಾರ್ಮಿಕ ವೆಚ್ಚ:

ಭಾರತದಲ್ಲಿ ಉತ್ಪಾದನಾ ವೆಚ್ಚವು ಚೀನಾದಲ್ಲಿನ ವೆಚ್ಚಕ್ಕಿಂತ ಗಣನೀಯವಾಗಿ ಕಡಮೆಯಾಗಿರುವುದು ಈ ಎರಡು ದೇಶಗಳ ನಡುವಿನ ಸ್ಪರ್ಧೆಯಲ್ಲಿ ಭಾರತದ ಕೈ ಮೇಲಾಗುವಂತೆ ಮಾಡಿ ಉತ್ಪಾದನಾಕ್ಷೇತ್ರದಲ್ಲಿ ಚೀನಾ ಹೊಂದಿದ್ದ ಪ್ರಾಬಲ್ಯವನ್ನು ಮುರಿಯುವಂತೆ ಮಾಡಿದೆ. ಭಾರತದಲ್ಲಿ ಈ ವೆಚ್ಚವು ಆಯಾ ಕ್ಷೇತ್ರಗಳನ್ನು ಅವಲಂಬಿಸಿ ರೂ. 12,500ರಿಂದ 25,000ದಷ್ಟು ಇದ್ದರೆ, ಚೀನಾದ ಹಲವು ಕೈಗಾರಿಕೆಗಳಲ್ಲಿ ಇದು ಸರಾಸರಿ ರೂ. 50,000ದಷ್ಟು (ಅಥವಾ ಸುಮಾರು 600 ಡಾಲರ್‌ಗಳಷ್ಟು) ಇದೆ. ಇಲ್ಲಿನ ವ್ಯತ್ಯಾಸವು ದೊಡ್ಡ ಪ್ರಮಾಣದಲ್ಲಿ ಉತ್ಪಾದನೆ ಮಾಡುವ ಸಂಸ್ಥೆಗಳಿಗೆ ಬಹಳ ಪ್ರೋತ್ಸಾಹದಾಯಕವಾಗಿರುತ್ತದೆ. ಭಾರತದ ಪರವಾಗಿರುವ ಇನ್ನೊಂದು ಮಹತ್ತ್ವದ ಅಂಶವೆಂದರೆ, ಇಲ್ಲಿನ ಉದ್ಯೋಗಾಕಾಂಕ್ಷಿ ಯುವಜನತೆಯ ಪ್ರಮಾಣ ಬಹಳ ಹೆಚ್ಚಿದೆ.




ಆದರೆ, 'ದಂಪತಿಗಳಿಗೆ ಒಂದು ಮಗು ಮಾತ್ರ' ಎಂಬ ನೀತಿಯನ್ನು ಹಲವಾರು ವರ್ಷಗಳಿಂದ ಅನುಸರಿಸಿಕೊಂಡು ಬಂದಿರುವ ಕಾರಣದಿಂದ ಇಂದು ಚೀನಾ ದೇಶದಲ್ಲಿ ಯುವಜನತೆಯ ಸಂಖ್ಯೆಯ ಕಡಮೆಯಾಗಿದೆ ಮತ್ತು ಮುಂದಿನ ದಿನಗಳಲ್ಲಿ ಇನ್ನೂ ಕಡಮೆಯಾಗಿ ಸಮಸ್ಯೆಯನ್ನು ತಂದೊಡ್ಡಲಿದೆ.

### ಕೈಗಾರಿಕಾ ನೀತಿಗಳು ಮತ್ತು ಪ್ರೋತ್ಸಾಹಕಗಳು:

ಭಾರತ ಸರ್ಕಾರದ 'ಭಾರತದಲ್ಲಿಯೇ ಉತ್ಪಾದಿಸಿ' ನೀತಿ, 'ಆತ್ಮನಿರ್ಭರ ಭಾರತ'ದ ಉಪಕ್ರಮ ಹಾಗೂ ಉತ್ಪಾದನೆಗೆ ಸಾಪೇಕ್ಷವಾಗಿ ನೀಡುವ ಉತ್ತೇಜನ ಹಾಗೂ ಕಾರ್ಪೊರೇಟ್ ಸಂಸ್ಥೆಗಳ ಮೇಲಿನ ತೆರಿಗೆ (ಚೀನಾದಲ್ಲಿರುವ ಶೇ 25ರಷ್ಟಕ್ಕೆ ಬದಲಾಗಿ ಭಾರತದಲ್ಲಿ ಇದು ಶೇ. 17ರಷ್ಟು ಇದೆ) ಈ ಅಂಶಗಳು ವಿದೇಶೀ ಬಂಡವಾಳ ಹೂಡಿಕೆಯನ್ನು ನಮ್ಮ ಕಡೆಗೆ ಆಕರ್ಷಿಸಲು ಸಮರ್ಥವಾಗಿವೆ.  ಈ ನೀತಿಗಳು, ಸುಧಾರಣೆಗಳು ಮತ್ತು ಕೈಗಾರಿಕೆಗಳಿಗೆ ನೀಡುವ ಉತ್ತೇಜನಗಳ ಕಾರಣದಿಂದ ವಿದೇಶೀ ಹೂಡಿಕೆದಾರರು ಭಾರತದಲ್ಲಿ ತಮ್ಮ ಆದ್ಯತೆಯ ದೇಶವನ್ನಾಗಿ ಮಾಡಿಕೊಂಡಿರುವುದರಿಂದ ಇಲ್ಲಿಯವರೆಗೆ ಚೀನಾದೇಶವು ಹೊಂದಿದ್ದ ಪ್ರಾಬಲ್ಯವನ್ನು ಮುರಿದು ಆ ಸ್ಥಾನವನ್ನು ನಾವು ಆಕ್ರಮಿಸಿಕೊಂಡಿದ್ದೇವೆ.

ಉತ್ಪಾದನೆಯನ್ನು ಅವಲಂಬಿಸಿದ ಉತ್ತೇಜನದ ಯೋಜನೆಯನ್ನು ಪ್ರಾರಂಭದಲ್ಲಿ ಮೊಬೈಲ್ ಫೋನ್‌ಗಳು, ಔಷಧಗಳ ತಯಾರಿಕೆಗೆ ಅಗತ್ಯವಾದ ಘಟಕಾಂಶಗಳು (ingredients), ವೈದ್ಯಕೀಯ ಸಲಕರಣೆಗಳು ಮೊದಲಾದವುಗಳನ್ನು ತಯಾರಿಸುವ ವಲಯಕ್ಕೆ ಎಂದು ರೂಪಿಸಲಾಗಿತ್ತು. ಸರ್ಕಾರದ ಈ ಸೌಲಭ್ಯಗಳನ್ನು ಹಾಗೂ ಇತರ ಉಪಕ್ರಮಗಳ ಲಾಭವನ್ನು ಪಡೆದುಕೊಂಡ ಔಷಧಗಳ ಮತ್ತು ಜೈವಿಕ ಪದಾರ್ಥಗಳ ವಲಯಗಳ ಉತ್ಪಾದನೆಗಳು ಭಾರತದ ರಫ್ತಿನಲ್ಲಿ ಪ್ರಮುಖ ಸ್ಥಾನವನ್ನು ಆಕ್ರಮಿಸಿಕೊಂಡವು.  ಈ ಉತ್ಪಾದನೆಯನ್ನು ಅವಲಂಬಿಸಿದ ಉತ್ತೇಜನದ ಒಂದು ಯೋಜನೆಯ ಕಾರಣದಿಂದಲೇ ಭಾರತದ ರಫ್ತು ವ್ಯಾಪಾರದಲ್ಲಿರೂ. 46,400 ಕೋಟಿಯ ಹೆಚ್ಚಳವು ಕಂಡು ಬಂದಿತು ಹಾಗೂ ಉದ್ಯೋಗಾವಕಾಶದಲ್ಲಿ ಹೆಚ್ಚಿನ ಅವಕಾಶಗಳನ್ನು ಕೆಲವೇ ವರ್ಷಗಳಲ್ಲಿ ಇದು ಸೃಷ್ಟಿಸಿತು.

ಕಾಲಕಳೆದಂತೆ, ಭಾರತವು ಆತ್ಮನಿರ್ಭರ ದೇಶವನ್ನಾಗಿಸುವ ದೃಷ್ಟಿಯಿಂದ 'ಈ ಯೋಜನೆಯು 'ಸನ್‌ರೈಸ್' (ವೇಗವಾಗಿ ವೃದ್ಧಿಯಾಗುತ್ತಿರುವ ಹಾಗೂ ಮುಂದಿನ ದಿನಗಳಲ್ಲಿ ವಿವಿಧ ದಿಕ್ಕುಗಳಲ್ಲಿ ವಿಸ್ತಾರವಾಗಿ ಬೆಳೆಯುವ ಸಾಮರ್ಥ್ಯವನ್ನು ಹೊಂದಿರುವಂತಹ) ಕೈಗಾರಿಕೆಗಳನ್ನು ಕೂಡ ತನ್ನ ವ್ಯಾಪ್ತಿಯಲ್ಲಿ ಸೇರಿಸಿಕೊಂಡಿತು.

ಉದಾಹರಣೆಗೆ, ಈ ಯೋಜನೆಯ ಲಾಭವನ್ನು ಪಡೆದ ಉದ್ದಿಮೆಗಳಲ್ಲಿ ಬೊಂಬೆಗಳನ್ನು ತಯಾರಿಸುವ ವಲಯವೂ ಒಂದು. ಈ ಹಿಂದೆ ಈ ಕ್ಷೇತ್ರದ ಅಗತ್ಯವನ್ನು ಪೂರೈಸಲು ವಿದೇಶಗಳನ್ನು ಅವಲಂಬಿಸಲಾಗುತ್ತಿತ್ತು. ಈಗ ಅದನ್ನು ತಪ್ಪಿಸಲು ಈ ಯೋಜನೆಯ ಜೊತೆಗೆ, ಟಾಯ್‌ಫೇರ್, ಟಾಯ್ಕಥಾನ್, ಟಾಯ್‌ಬಿಸಿನೆಸ್ ಲೀಗ್ ಮೊದಲಾದ ಉಪಕ್ರಮಗಳನ್ನು ಕೈಗೆತ್ತಿಕೊಳ್ಳಲಾಯಿತು. ಪರಿಣಾಮವಾಗಿ, ಈ ಕ್ಷೇತ್ರದಿಂದ ಆಗುತ್ತಿದ್ದ ಆಟಿಕೆಗಳ ರಫ್ತು ಪ್ರಮಾಣವು ಹೆಚ್ಚಾಗಿ, ಆಮದಿನ ಪ್ರಮಾಣವು ಬಹಳಷ್ಟು ಮಟ್ಟಿಗೆ ಕಡಮೆಯಾಯಿತು.

ಈ ವಿಷಯಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಮುಂದಾಲೋಚನೆಯಿಂದ ತೆಗೆದುಕೊಂಡ ಕ್ರಮಗಳನ್ನು ನಾವು ಶ್ಲಾಘಿಸಬೇಕು. ಇತರ ದೇಶಗಳೊಡನೆ ಆರ್ಥಿಕಕ್ಷೇತ್ರದಲ್ಲಿ ಹಾಗೂ ವ್ಯಾಪಾರ ವ್ಯವಹಾರಗಳ ವಿಷಯದಲ್ಲಿ ಮಾಡಿಕೊಂಡ ಸಹಕಾರ ಒಪ್ಪಂದಗಳು, ಭಾರತವು ಇಂದಿನ ಉನ್ನತ ಸ್ಥಾನವನ್ನು ಗಳಿಸಲು ಬಹಳಷ್ಟು ನೆರವಾದವು ಮತ್ತು ಭೌಗೋಳಿಕ ಮೇರೆಗಳನ್ನು ಇಲ್ಲವಾಗಿಸಿದವು. ಮುಖ್ಯವಾಗಿ ಗಣಿಗಾರಿಕೆ, ತಂತ್ರಜ್ಞಾನ ಹಾಗೂ ಉತ್ಪಾದನಾವಲಯಗಳ ಅಭಿವೃದ್ಧಿಗೆ ಮತ್ತು ಹಲವಾರು ವಿಷಯಗಳಲ್ಲಿ ದೇಶವು ಸ್ವಾವಲಂಬನೆಗೆ ಇದು ಸಹಕಾರಿಯಾಯಿತು. ಅಲ್ಲದೆ, ಇತರ ದೇಶಗಳು ಅನಿವಾರ್ಯವಾಗಿ ಚೀನಾದ ಮೇಲೆ ಹೊಂದಿದ್ದ ಅವಲಂಬನೆಯ ಪ್ರಮಾಣವನ್ನು ತಗ್ಗಿಸುವಲ್ಲಿ ಕೂಡ ಇದು ಆ ದೇಶಗಳಿಗೆ ನೆರವಾಯಿತು.

### ವಿದ್ಯುಚ್ಛಕ್ತಿಯ ಮೇಲಿನ ವೆಚ್ಚಗಳು

ಪ್ರಸ್ತುತ, ಭಾರತದಲ್ಲಿ ವಿದ್ಯುಚ್ಛಕ್ತಿಯ ಮೇಲಿನ ವೆಚ್ಚವು ಚೀನಾದಲ್ಲಿ ಇರುವುದಕ್ಕಿಂತ ಬಹಳ ಹೆಚ್ಚಾಗಿದೆ.  ಆದರೆ, ಭಾರತವು ಸೌರವಿದ್ಯುತ್ತು ಹಾಗೂ ಇತರ ನವೀಕರಿಸಬಹುದಾದ ಶಕ್ತಿಯ ಉತ್ಪಾದನೆಗೆ ಆದ್ಯತೆಯ ಮೇಲೆ ಗಮನವನ್ನು ಹರಿಸುತ್ತಿರುವುದರಿಂದ ಭಾರತವು ಚೀನಾಕ್ಕಿಂತ ಕಡಮೆ ಬೆಲೆಯಲ್ಲಿ ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲು ಶೀಘ್ರದಲ್ಲಿಯೇ ಸಮರ್ಥವಾಗುತ್ತದೆ.

### ತಂತ್ರಜ್ಞಾನದಲ್ಲಿನ ಪ್ರಗತಿ ಹಾಗೂ ಉತ್ಪಾದಕತೆಯ ದರದಲ್ಲಿ ಹೆಚ್ಚಳ

ತಂತ್ರಜ್ಞಾನದ ಅಭಿವೃದ್ಧಿ ಹಾಗೂ ಉತ್ಪಾದಕತೆಯ ದರದ ಹೆಚ್ಚಳ ದೃಷ್ಟಿಯಿಂದ ಹಲವಾರು ಕೈಗಾರಿಕೆ ಹಾಗೂ ಸೇವಾವಿಭಾಗದಲ್ಲಿ ಭಾರತವು ಇನ್ನೂ ಚೀನಾಕ್ಕಿಂತ ಹಿಂದೆ ಇದೆ. ಈಗ ಇರುವ ಕೇಂದ್ರ ಸರ್ಕಾರವು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಇದಕ್ಕೆ ಪರಿಹಾರವನ್ನು ಕಂಡುಕೊಂಡು ಪರಿಸ್ಥಿತಿಯನ್ನು ಸುಧಾರಿಸುವ ಪ್ರಯತ್ನಗಳನ್ನು ಮಾಡುತ್ತಿದೆ.  ಇದಕ್ಕಾಗಿ ಐಓಟಿ (ಇಂಟರನೆಟ್ ಆಫ್ ಥಿಂಗ್ಸ್) ಮತ್ತು ಕೈಗಾರಿಕೆಗಳಲ್ಲಿ ಯಾಂತ್ರೀಕರಣ ಮೊದಲಾದ ಕ್ರಮಗಳಿಗೆ ಉತ್ತೇಜನವನ್ನು ನೀಡುತ್ತಿದೆ. ಇಂತಹ ಉಪಕ್ರಮಗಳಿಂದ ಭಾರತದ ಉತ್ಪಾದನಾವಲಯವು ತನ್ನ ಈಗಿನ ಚಿತ್ರಣವನ್ನೇ ಸಂಪೂರ್ಣವಾಗಿ ಬದಲಾಯಿಸಿಕೊಂಡು ಜಾಗತಿಕವಾಗಿ ಹೆಚ್ಚು ದಕ್ಷವಾಗುತ್ತದೆ ಹಾಗೂ ಸ್ಪರ್ಧಾಶೀಲಗುಣವನ್ನು ಬೆಳೆಸಿಕೊಳ್ಳಲು ಶಕ್ತವಾಗುತ್ತದೆ. ಅಂದರೆ ನಾವು ಕೂಡ ತಂತ್ರಜ್ಞಾನ ಹಾಗೂ ಉತ್ಪಾದಕತೆಯ ದರದ ವಿಷಯದಲ್ಲಿ ಚೀನಾಕ್ಕೆ ಸೆಡ್ಡು ಹೊಡೆಯುವ ಹಂತವನ್ನು ಈ ಮೂಲಕ ಶೀಘ್ರವಾಗಿ ಮತ್ತು ನಿಶ್ಚಿತವಾಗಿ ಪಡೆಯುತ್ತೇವೆ.

### ಸರಬರಾಜು ವ್ಯವಸ್ಥೆಯಲ್ಲಿ ಆಗುತ್ತಿರುವ ವಿಕೇಂದ್ರೀಕರಣ

ಜಾಗತಿಕ ಕಂಪನಿಗಳು ತಮ್ಮ ಸರಬರಾಜಿನ ವ್ಯವಸ್ಥೆಯನ್ನು ವಿಕೇಂದ್ರೀಕರಿಸಿ, ವ್ಯವಹಾರದಲ್ಲಿ ಅನಿರೀಕ್ಷಿತವಾಗಿ ಸಂಭವಿಸಬಹುದಾದ ಅಪಾಯದ ಸನ್ನಿವೇಶಗಳನ್ನು ನಿವಾರಿಸಿಕೊಳ್ಳುವತ್ತ ತಮ್ಮ ಗಮನವನ್ನು ಹರಿಸುತ್ತಿವೆ ಮತ್ತು ಇದಕ್ಕಾಗಿ ಚೀನಾದಂತಹ ಒಂದೇ ದೇಶದ ಮೇಲಿನ ಸಂಪೂರ್ಣ ಅವಲಂಬನೆಯನ್ನು ತಪ್ಪಿಸಲು ಪ್ರಯತ್ನಿಸುತ್ತಿವೆ. ಈಗ ಭಾರತವು ಚೀನಾ ಮತ್ತು ಇತರ ಪೌರ್ವಾತ್ಯ ದೇಶಗಳಿಗೆ ಪ್ರತಿಯಾಗಿ ವಿಶ್ವದಲ್ಲಿ ತನ್ನ ಸ್ಥಾನವನ್ನು ಪ್ರತಿಷ್ಠಾಪಿಸಿಕೊಳ್ಳುತ್ತಿದೆ. ಈ ಕಾರಣದಿಂದ ನಮ್ಮ ರಫ್ತಿನಲ್ಲಿ ಗಮನಾರ್ಹವಾದ ಏರಿಕೆಯು ಕಂಡುಬರುತ್ತಿದೆ ಮತ್ತು ಇದು ಇನ್ನೂ ಏರುಗತಿಯಲ್ಲಿ ಸಾಗುವ ಲಕ್ಷಣಗಳು ಕಂಡುಬರುತ್ತಿವೆ.

▸▸ 4ನೇ ಪುಟಕ್ಕೆ...

ಪತ್ರಿಕೆಯ ಬಳಗ
ಸಹಾಯಕ ಸಂಪಾದಕರು
ಅಂಬಿಕಾ ಎಂ. ಹುಲಿನಾಯ್ಕರ್
ಸಂಯೋಜಕ ಸಂಪಾದಕರು
ಎಂ.ಎಸ್.ಪಾಟೀಲ್
ಸಲಹಾ ಸಂಪಾದಕರು
ಎನ್.ಭಾರತಿ
ಸಂಪಾದಕ ಮಂಡಲಿ
ಡಾ. ಭವಾನಿ ಸ್ಟಾಲಿನ್
ಡಾ. ಮನೋಜ್ಞಣಿ ಎಂ.ಎಚ್
ಡಾ. ಲಾವಣ್ಯ ರಮಣ
ಸಹಾಯಕ ಸಂಪಾದಕರು:
ಎನ್. ಆನಂದ
ಪುಟ ವಿನ್ಯಾಸ:
ಸುಮಾ ಸಾಗರ್

# ರಕ್ತದಾನದ ಮಹತ್ವ – ಬ್ಲಡ್‌ಬ್ಯಾಂಕ್‌ನ ಕಾರ್ಯನಿರ್ವಹಣೆ

■ ಕೆ.ಎಸ್. ರಾಜಮನ್ನಾರ್
ಹಿರಿಯ ಪತ್ರಕರ್ತರು

ಆಧುನಿಕ ಜಗತ್ತಿನಲ್ಲಿ ಹಾಗೂ ಮಾನವ ಇತಿಹಾಸದಲ್ಲಿ ಒಂದು ದೊಡ್ಡ ಸಂಶೋಧನೆ ಎಂದರೆ, ಒಬ್ಬ ಮನುಷ್ಯನ ರಕ್ತವನ್ನು ಮತ್ತೊಬ್ಬನ ಜೀವ ಉಳಿಸಲು ಬಳಸುವುದನ್ನು ಕಂಡುಹಿಡಿದುದು. ರಕ್ತವನ್ನು ಸ್ವಯಂಪ್ರೇರಿತವಾಗಿ ಯಾವುದೇ ಪ್ರತಿಫಲದ ಅಪೇಕ್ಷೆಯಿಲ್ಲದೆ ನೀಡುವುದೇ 'ರಕ್ತದಾನ'. ರಕ್ತಕ್ಕೆ ವರ್ಷವಿಡೀ ನಿರಂತರ ಬೇಡಿಕೆಯಿರುತ್ತದೆ. ಏಕೆಂದರೆ, ಪ್ರತಿನಿತ್ಯ ಒಂದಲ್ಲ ಒಂದು ಕಡೆ ಅಪಘಾತಗಳು ಸಂಭವಿಸುತ್ತಿರುತ್ತವೆ ಮತ್ತು ತುರ್ತು ಶಸ್ತ್ರಚಿಕಿತ್ಸೆಗಳು ನಿರಂತರವಾಗಿ ನಡೆಯುತ್ತಿರುತ್ತವೆ. ಇಂತಹ ಪ್ರಕರಣಗಳಲ್ಲೆಲ್ಲಾ ರಕ್ತಕ್ಕೆ ಬೇಡಿಕೆ ಇರುತ್ತದೆ.

ರಕ್ತದಾನ ಮಾಡಿದರೆ ಕೆಲವು ಆರೋಗ್ಯದ ಸಮಸ್ಯೆ ಕಾಣಿಸಿಕೊಳ್ಳುತ್ತವೆ ಎಂಬಂತಹ ಕೆಲವು ತಪ್ಪು ಕಲ್ಪನೆಗಳು ಜನಸಾಮಾನ್ಯರಲ್ಲಿ ಇರುವುದು ಸಹಜ. ಹೀಗಾಗಿ ಯಾರು ರಕ್ತದಾನ ಮಾಡಬಹುದು, ರಕ್ತದಾನದಿಂದ ಆರೋಗ್ಯಕ್ಕೆ ಯಾವ ಪ್ರಯೋಜನಗಳಿವೆ, ರಕ್ತನಿಧಿ (ಬ್ಲಡ್‌ಬ್ಯಾಂಕ್) ಹೇಗೆ ಕಾರ್ಯನಿರ್ವಹಿಸುತ್ತದೆ, ಅಲ್ಲಿ ಎಷ್ಟು ಸಿಬ್ಬಂದಿ ಕೆಲಸ ಮಾಡುತ್ತಾರೆ ಎಂಬ ವಿಷಯಗಳ ಬಗೆಗೆ ಶ್ರೀದೇವಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರದ ಬ್ಲಡ್‌ಬ್ಯಾಂಕ್ ಮುಖ್ಯಸ್ಥರಾದ ಡಾ. ಜಯಕುಮಾರ್ ಶ್ರೀದೇವಿ ಅಂತರಂಗ ಪತ್ರಿಕೆಗೆ ಮಾಹಿತಿ ನೀಡಿದ್ದಾರೆ.

ಸ್ವಯಂಪ್ರೇರಿತ ರಕ್ತದಾನಿಗಳ ನಿಸ್ವಾರ್ಥ ತ್ಯಾಗಕ್ಕೆ, ಮಾನವೀಯ ಗುಣಕ್ಕೆ ಕೃತಜ್ಞತೆಯನ್ನು ತೋರಿಸಲು ಪ್ರತಿ ವರ್ಷ ಜೂನ್ 14ರಂದು 'ವಿಶ್ವ ರಕ್ತದಾನಿಗಳ ದಿನ'ವನ್ನು ಆಚರಿಸಲಾಗುತ್ತದೆ. ರಕ್ತದಾನವು ಇನ್ನೊಬ್ಬ ವ್ಯಕ್ತಿಗೆ ನೀಡಬಹುದಾದ ಅತ್ಯಂತ ಅಮೂಲ್ಯ ಕೊಡುಗೆಯಾಗಿದೆ. ದೇಶದಲ್ಲಿ ಪ್ರತಿ ಎರಡು ಸೆಕೆಂಡಿಗೆ ಒಂದು ಬಾರಿಯಂತೆ ರಕ್ತಕ್ಕೆ ಬೇಡಿಕೆಯಿದೆ. ಆದರೆ, ರಕ್ತದ ಲಭ್ಯತೆಯಲ್ಲಿ ಬಹಳ ಕೊರತೆ ಇದೆ.

ಭೂಮಿ ಮೇಲಿರುವ ಪ್ರತಿಯೊಬ್ಬ ಮನುಷ್ಯನ ದೇಹದಲ್ಲಿ ಇರುವುದು ಒಂದೇ ರಕ್ತ. ಮನುಷ್ಯ ಆರೋಗ್ಯವಾಗಿರಲು ಶುದ್ಧ ರಕ್ತದ ಆವಶ್ಯಕತೆಯಿದೆ.

ದೇಶದಲ್ಲಿ ಪ್ರತಿವರ್ಷ ಐದು ಕೋಟಿ ಯೂನಿಟ್ ರಕ್ತದ ಅಗತ್ಯವಿದೆ. ಆದರೆ, ಲಭ್ಯವಿರುವುದು ಕೇವಲ 2.5 ಕೋಟಿ ಯೂನಿಟ್ ಮಾತ್ರ. ಆದುದರಿಂದ ರಕ್ತದಾನ ಪ್ರಕ್ರಿಯೆ ಹೆಚ್ಚಾಗಬೇಕು, ಜನಸಾಮಾನ್ಯರಲ್ಲಿ ಹೆಚ್ಚಿನ ಜಾಗೃತಿ ಮೂಡಬೇಕು ಎಂದು ಡಾ. ಜಯಕುಮಾರ್ ಒತ್ತಿ ಹೇಳುತ್ತಾರೆ.

ರಕ್ತದಾನಕ್ಕೆ ಮೊದಲು ಅರ್ಜಿ ನಮೂನೆಯನ್ನು ದಾನಿಗಳು ತುಂಬಿ ಸಹಿ ಮಾಡಿಕೊಡಬೇಕಾಗುತ್ತದೆ. ಅರ್ಜಿ ನಮೂನೆ ಸರಳವಾಗಿರುತ್ತದೆ. ದಾನಿಗಳು ಆರೋಗ್ಯವಂತರಾಗಿರಬೇಕು. ಅವರಿಗೆ ಯಾವುದೇ ಗಂಭೀರವಾದ ಆರೋಗ್ಯ ಸಮಸ್ಯೆಗಳು ಇರಬಾರದು. 18 ರಿಂದ 60 ವರ್ಷ ವಯಸ್ಸಿನವರು ಸ್ವಯಂಪ್ರೇರಿತವಾಗಿ ರಕ್ತದಾನ ಮಾಡಬಹುದು. ರಕ್ತದಾನಿಯ ತೂಕ ಕನಿಷ್ಠ 45 ಕೆ.ಜಿ.ಗಿಂತ ಜಾಸ್ತಿ ಇರಬೇಕು. ದಾನಿಯ ರಕ್ತದಲ್ಲಿ ಹಿಮೋಗ್ಲೋಬಿನ್ ಅಂಶ 12.5 ಗ್ರಾಂಗಳಿಗಿಂತ ಹೆಚ್ಚಿಗೆ ಇರಬೇಕು.

ಸಾಮಾನ್ಯವಾಗಿ ಒಬ್ಬ ವ್ಯಕ್ತಿಯಿಂದ 350ರಿಂದ 450 ಮಿಲಿ ಲೀಟರ್ ರಕ್ತ ತೆಗೆದುಕೊಳ್ಳಲಾಗುತ್ತದೆ. ದಾನ ಮಾಡಿದಷ್ಟೇ ಪ್ರಮಾಣದ ರಕ್ತವು ಹೊಸದಾಗಿ ಎರಡು ದಿನಗಳಲ್ಲಿ ಅವರ ದೇಹದಲ್ಲಿ ಉತ್ಪತ್ತಿಯಾಗುತ್ತದೆ. ಹೊಸ ರಕ್ತದ ಚಲನೆಯಿಂದ


ಸಮೂಹಿಕ ರಕ್ತದಾನದ ಶಿಬಿರ.



ರಕ್ತದಾನದ ಶಿಬಿರದಲ್ಲಿ ಶ್ರೀದೇವಿ ವೈದ್ಯಕೀಯ ಸಿಬ್ಬಂದಿ.

**ಸ್ವಯಂಪ್ರೇರಿತ ರಕ್ತದಾನಿಗಳ ನಿಸ್ವಾರ್ಥ ತ್ಯಾಗಕ್ಕೆ, ಮಾನವೀಯ ಗುಣಕ್ಕೆ ಕೃತಜ್ಞತೆಯನ್ನು ತೋರಿಸಲು ಪ್ರತಿ ವರ್ಷ ಜೂನ್ 14ರಂದು 'ವಿಶ್ವ ರಕ್ತದಾನಿಗಳ ದಿನ'ವನ್ನು ಆಚರಿಸಲಾಗುತ್ತದೆ. ರಕ್ತದಾನವು ಇನ್ನೊಬ್ಬ ವ್ಯಕ್ತಿಗೆ ನೀಡಬಹುದಾದ ಅತ್ಯಂತ ಅಮೂಲ್ಯ ಕೊಡುಗೆಯಾಗಿದೆ. ದೇಶದಲ್ಲಿ ಪ್ರತಿ ಎರಡು ಸೆಕೆಂಡಿಗೆ ಒಂದು ಬಾರಿಯಂತೆ ರಕ್ತಕ್ಕೆ ಬೇಡಿಕೆಯಿದೆ. ಆದರೆ, ರಕ್ತದ ಲಭ್ಯತೆಯಲ್ಲಿ ಬಹಳ ಕೊರತೆ ಇದೆ.**

ಕಾರ್ಯತತ್ಪರತೆ, ಜ್ಞಾಪಕಶಕ್ತಿ ವೃದ್ಧಿಯಾಗುತ್ತದೆ. ಕೊಬ್ಬಿನ ಅಂಶ ಕಡಿಮೆಮಾಡಲು ರಕ್ತದಾನ ಸಹಾಯವಾಗುತ್ತದೆ.

ಹೃದಯಾಘಾತ, ರಕ್ತದ ಒತ್ತಡ, ಮತ್ತು ಇತರ ಕೆಲವು ರೋಗಗಳನ್ನು ತಡೆಗಟ್ಟಲು ಕೂಡ ರಕ್ತದಾನವು ಸಹಾಯಕವಾಗುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ ಇದರಿಂದ ಒಂದು ಜೀವವನ್ನು ಉಳಿಸಿದಂತಾಗುತ್ತದೆ ಎಂಬುದು ಡಾ. ಜಯಕುಮಾರ್ ಅವರ ಸ್ಪಷ್ಟ ಅಭಿಮತ. ಒಬ್ಬ ವ್ಯಕ್ತಿಯು ರಕ್ತದಾನ ಮಾಡುವುದರಿಂದ ಕನಿಷ್ಠ ಮೂರು ಜೀವಗಳನ್ನು ಉಳಿಸಬಹುದಾಗಿದೆ.


### ರಕ್ತದಾನದದ ಬಗೆಗೆ ಈ ವಿಷಯಗಳು ಗೊತ್ತಿರಲಿ:

- ರಕ್ತಕ್ಕೆ ಪರ್ಯಾಯವಿಲ್ಲ, ರಕ್ತವನ್ನು ಕೃತಕವಾಗಿ ಉತ್ಪಾದಿಸುವುದು ಸಾಧ್ಯವಿಲ್ಲ.
- ರಕ್ತವನ್ನು ರಕ್ತದಾನಿಗಳಿಂದ ಮಾತ್ರ ಪಡೆಯಬಹುದು. ರಕ್ತದಾನ ಮಾಡಿದ ಕೆಲವೇ ಗಂಟೆಗಳಲ್ಲಿ ದಾನಿಯ ದೇಹದಲ್ಲಿ ಮತ್ತೆ ಪುನರುತ್ಪತ್ತಿಯಾಗಲು ಪ್ರಾರಂಭವಾಗುತ್ತದೆ.
- ರಕ್ತದಾನ ಮಾಡುವಾಗ, ಕೇವಲ ಒಂದು ಚುಚ್ಚುಮದ್ದು ತೆಗೆದುಕೊಂಡಷ್ಟೇ ನೋವಾಗುತ್ತದೆ.
- ರಕ್ತದಾನ ಮಾಡಿ ಹೊರಹೋಗುವ ಮೊದಲು 20 ನಿಮಿಷಗಳ ವಿಶ್ರಾಂತಿ ತೆಗೆದುಕೊಳ್ಳಬೇಕು.

ರಕ್ತದಲ್ಲಿ ಪ್ಲಾಸ್ಮ, ಕೆಂಪು ರಕ್ತಕಣ (RBC), ಪ್ಲೇಟ್‌ಲೆಟ್ ಎಂಬ ಮೂರು ಘಟಕಗಳಿರುತ್ತವೆ. ರೋಗಿಗಳ ಅಗತ್ಯವಾದ ಅಂಶವಿರುವ ರಕ್ತವನ್ನು ಅವರಿಗೆ ನೀಡಲಾಗುತ್ತದೆ ಹೀಗಾಗಿ ಒಬ್ಬ ವ್ಯಕ್ತಿಯ ರಕ್ತದಾನದಿಂದ ಮೂರು ಜೀವಗಳನ್ನು ಉಳಿಸಬಹುದಾಗಿದೆ. ಪ್ಲಾಸ್ಮವನ್ನು ಗರಿಷ್ಠ ಒಂದು ವರ್ಷದವರೆಗೂ, ಪ್ಲೇಟ್‌ಲೆಟ್‌ಗಳನ್ನು ಗರಿಷ್ಠ ಐದು ದಿನಗಳವರೆಗೂ ಸಂಗ್ರಹಿಸಿಡಬಹುದು. ಇದಕ್ಕೆ ಪ್ರತ್ಯೇಕ ರೆಫ್ರಿಜರೇಟರ್‌ಗಳ ಅಗತ್ಯವಿರುತ್ತದೆ.

ಆರೋಗ್ಯವಂತ ಮನುಷ್ಯನ ದೇಹದಲ್ಲಿ ಐದು ಲೀಟರ್ ರಕ್ತವಿರುತ್ತದೆ. 350ರಿಂದ 450 ಮಿಲಿಲೀಟರ್ ರಕ್ತದಾನದಿಂದ ಯಾವುದೇ ರೀತಿಯ ಆರೋಗ್ಯ ಸಮಸ್ಯೆ ರಕ್ತದಾನಿಗೆ ಬರುವುದಿಲ್ಲ. ಬದಲಿಗೆ ರೋಗ ನಿರೋಧಕ ಶಕ್ತಿ ಹೆಚ್ಚಾಗುತ್ತದೆ ಎಂಬುದನ್ನು ದಾನಿಗಳು ಅರ್ಥಮಾಡಿಕೊಳ್ಳಬೇಕು. ರಕ್ತದಲ್ಲಿ ಎಂಟು ಗುಂಪುಗಳ ವರ್ಗೀಕರಣವಿರುತ್ತದೆ.

ಕ್ಯಾನ್ಸರ್, ಹಿಮೋಫಿಲಿಯಾ ಮುಂತಾದ ರೋಗಿಗಳು ರಕ್ತಕ್ಕಾಗಿ ದಾನಿಗಳನ್ನೇ ಅವಲಂಬಿಸಿರುತ್ತಾರೆ. ಸಂಗ್ರಹಿಸಿದ ರಕ್ತ 35ರಿಂದ ಗರಿಷ್ಠ 40 ದಿನಗಳವರೆಗೆ ತನ್ನ ಶಕ್ತಿ ಉಳಿಸಿಕೊಂಡಿರುತ್ತದೆ. ನಂತರ ಅದು ಪ್ರಯೋಜನಕ್ಕೆ ಬರುವುದಿಲ್ಲ. ಈ ಕಾರಣದಿಂದ ರಕ್ತದಾನದ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿರಲೇಬೇಕು.




### ರಕ್ತ ಕೊಡುವುದು ಯಾರಿಗೆ?

ದಾನಿಗಳಿಂದ ಸಂಗ್ರಹವಾದ ರಕ್ತವನ್ನು ಹೆಚ್ಚಾಗಿ ಗರ್ಭಿಣಿಯರು, ಅಪಘಾತಗಳಲ್ಲಿ ತೀವ್ರವಾಗಿ ಗಾಯಗೊಂಡವರು, ರಕ್ತಹೀನತೆಯನ್ನು ಹೊಂದಿರುವವರು, ಶಸ್ತ್ರಚಿಕಿತ್ಸೆಗಳಿಗೆ ಒಳಗಾದವರು ಮೊದಲಾದವರಿಗೆ ರಕ್ತದ ಆವಶ್ಯಕತೆ ಇರುತ್ತದೆ.

### ಎಷ್ಟು ಜನ ಕೆಲಸ ಮಾಡುತ್ತಾರೆ?

ಬ್ಲಡ್‌ಬ್ಯಾಂಕ್ ದಿನದ 24ಗಂಟೆಯೂ ಕಾರ್ಯನಿರ್ವಹಿಸುತ್ತಿರುತ್ತದೆ. ಪ್ರತಿ ಪಾಳಿಯಲ್ಲಿಯೂ 15ರಿಂದ 20 ಮಂದಿ ಸಿಬ್ಬಂದಿ ಕಾರ್ಯನಿರ್ವಹಿಸುತ್ತಾರೆ. ಇವರಲ್ಲಿ ಮೂರು ಮಂದಿ ವೈದ್ಯರು, ಇಬ್ಬರು ಟೆಕ್ನಿಕಲ್ ಸೂಪರ್‌ವೈಸರ್, ಆರು ಮಂದಿ ಟೆಕ್ನಿಷಿಯನ್, ಮೂವರು ಶುಶ್ರೂಷಕರು ಮತ್ತು ಇತರರು ಇರುತ್ತಾರೆ.

### ಯಾರು ರಕ್ತದಾನ ಮಾಡಬಾರದು?

- ರಕ್ತದೊತ್ತಡ, ಮಧುಮೇಹ ಮೊದಲಾದ ಗಂಭೀರ ಅಥವಾ ಸೋಂಕು ಕಾಯಿಲೆಯಿಂದ ಬಳಲುತ್ತಿರುವವರು ರಕ್ತದಾನ ಮಾಡಬಾರದು.
- ಮದ್ಯಪಾನ ಮತ್ತು ಮಾದಕದ್ರವ್ಯ ಸೇವನೆ ಮಾಡಿ ರಕ್ತದಾನ ಮಾಡಬಾರದು.
- ಯಾವುದೇ ವ್ಯಕ್ತಿ ಕಾಯಿಲೆಯ ವಿರುದ್ಧ ಲಸಿಕೆ ಪಡೆದಿದ್ದರೆ, ಅಂತಹವರು ಲಸಿಕೆ ಪಡೆದ ನಾಲ್ಕು ವಾರಗಳವರೆಗೆ ರಕ್ತದಾನ ಮಾಡಬಾರದು.
- ಮಲೇರಿಯಾ ರೋಗಕ್ಕೆ ಚಿಕಿತ್ಸೆ ಪಡೆದಿದ್ದರೆ, ಚಿಕಿತ್ಸೆ ಪಡೆದ ಅನಂತರದ ಮೂರು ತಿಂಗಳು ರಕ್ತದಾನ ಮಾಡಬಾರದು.
- ಹಿಂದಿನ ಮೂರು ತಿಂಗಳುಗಳಲ್ಲಿ ತಾವು ರಕ್ತ ಅಥವಾ ರಕ್ತದ ಯಾವುದೇ ಅಂಶವನ್ನು ಪಡೆದಿದ್ದರೆ ಅಂತಹವರು ರಕ್ತದಾನ ಮಾಡಬಾರದು.
- ಯಾವುದೇ ಲೈಂಗಿಕ ರೋಗವಿರುವವರು ರಕ್ತದಾನ ಮಾಡಬಾರದು.
- ಯಾವುದೇ ದೊಡ್ಡ ಪ್ರಮಾಣದ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರೆ ಅಂತಹವರು ಶಸ್ತ್ರಚಿಕಿತ್ಸೆಯಾಗಿ ಆರು ತಿಂಗಳಾಗುವವರೆಗೆ ರಕ್ತದಾನ ಮಾಡಬಾರದು.
- ಚಿಕ್ಕ ಪ್ರಮಾಣದ ಶಸ್ತ್ರಚಿಕಿತ್ಸೆಗೆ ಒಳಗಾದವರು ಮುಂದಿನ ಮೂರು ತಿಂಗಳವರೆಗೆ ರಕ್ತದಾನ ಮಾಡಬಾರದು.
- ಕ್ಯಾನ್ಸರ್, ಹೃದಯಸಂಬಂಧಿ ಕಾಯಿಲೆ, ಅಸಹಜ ರಕ್ತಸ್ರಾವ, ಮೂತ್ರಪಿಂಡದ ಕಾಯಿಲೆ ಮತ್ತು ಯಕೃತ್, ಲಿವರ್‌ಗೆ ಸಂಬಂಧಿಸಿದ ಕಾಯಿಲೆ ಇರುವವರು, ಹೆಪಟೈಟಿಸ್ 'ಬಿ' ಮತ್ತು 'ಸಿ' ಕಾಯಿಲೆಯಿರುವವರು ರಕ್ತದಾನ ಮಾಡಬಾರದು.

## ಜೇಮ್ಸ್ ಹ್ಯಾರಿಸನ್ ಅವರ ಇತಿಹಾಸ!!



ನೀವು ಆಸ್ಟ್ರೇಲಿಯಾದ ಜೇಮ್ಸ್ ಕ್ರಿಸ್ಟೋಫರ್ ಹ್ಯಾರಿಸನ್ ಎಂಬ ವ್ಯಕ್ತಿಯ ಹೆಸರು ಕೇಳಿರಬಹುದು. ನಂಬಿದರೆ ನಂಬಿ ಬಿಟ್ಟರೆ ಬಿಡಿ, ಆತ ತನ್ನ ಜೀವಿತದ ಅವಧಿಯಲ್ಲಿ ಬರೋಬರಿ 1,173 ಬಾರಿ ರಕ್ತದಾನ ಮಾಡಿ ಜಗತ್ತಿನಲ್ಲಿಯೇ ದಾಖಲೆಯ ಇತಿಹಾಸವನ್ನು ನಿರ್ಮಿಸಿದ್ದಾರೆ. ತಮ್ಮ ಅರವತ್ತನೆಯ ವಯಸ್ಸಿನವರೆಗೆ ನಿರಂತರವಾಗಿ ವಾರಕ್ಕೆ ಎರಡು ಬಾರಿ ರಕ್ತದಾನ ಮಾಡುತ್ತಿದ್ದರು. ಮತ್ತೊಂದು ಪರಮಾಶ್ಚರ್ಯದ ಸಂಗತಿಯೆಂದರೆ ಇಷ್ಟು ಬಾರಿ ರಕ್ತದಾನ ಮಾಡಿದ ಆ ವ್ಯಕ್ತಿ ಸೂಜಿಗೆ ಹೆದರುತ್ತಿದ್ದರು ಮತ್ತು ಒಮ್ಮೆಯೂ ಕೂಡ ಸಿರಿಂಜಿನ ಸೂಜಿ ಯಾವ ರೀತಿ ಇರುತ್ತದೆ ಎಂಬುದನ್ನು ಕೂಡ ಅವರು ನೋಡಿರಲೇ ಇಲ್ಲ..!

ಇವರ ರಕ್ತದಲ್ಲಿ ರೀಸಸ್ ಕಾಯಿಲೆ ನಿವಾರಿಸುವ ಪ್ರತಿಕಾಯಗಳನ್ನು ಕಂಡು ವೈದ್ಯಕೀಯ ಲೋಕವೇ ನಿಬ್ಬೆರಗುಗೊಂಡಿತು. ಜೇಮ್ಸ್‌ಕ್ರಿಸ್ಟೋಫರ್ ಹ್ಯಾರಿಸನ್ ಅವರ ರಕ್ತದ ಪ್ರತಿಕಾಯಗಳಿಂದ ಜಗತ್ತಿನಲ್ಲಿ 24 ಲಕ್ಷ ನವಜಾತ ಶಿಶುಗಳು ತಮ್ಮ ಜೀವವನ್ನು ಉಳಿಸಿಕೊಂಡು ನಾನಾ ದೇಶಗಳಗಳಲ್ಲಿ ಜೀವಿಸುತ್ತಿವೆ ಎಂದರೆ ಒಬ್ಬ ವ್ಯಕ್ತಿಯ ರಕ್ತದಾನದಿಂದ ಎಷ್ಟು ಜೀವಗಳನ್ನು ಉಳಿಸಬಹುದು ಎಂಬುದಕ್ಕೆ ಇವರ ಪ್ರಕರಣ ಅತ್ಯುತ್ತಮ ಉದಾಹರಣೆ.

# ಡಾ.ಹುಲಿನಾಯ್ಕರ್ ಕೊರಳಿಗೆ ಎಚ್.ಡಿ. ದೇವೇಗೌಡ ಪ್ರಶಸ್ತಿ ಗರಿ..

▶▶ ಮೊದಲನೇ ಪುಟದಿಂದ

ಸಾಮಾನ್ಯ ಬಡ ಕುಟುಂಬದಲ್ಲಿ ಜನಿಸಿ ತುಮಕೂರನ್ನು ಕರ್ಮಭೂಮಿಯನ್ನಾಗಿ ಮಾಡಿಕೊಂಡು ಸರ್ಕಾರಿ ವೈದ್ಯ– ಸರ್ಜನ್ ಆಗಿ ಸೇವೆ ಸಲ್ಲಿಸಿ ಅದೇ ತುಮಕೂರಿನಲ್ಲಿ ಮೊದಲಿಗೆ ಶ್ರೀದೇವಿ ನರ್ಸಿಂಗ್ ಶಾಲೆ–ಕಾಲೇಜು ಆರಂಭಿಸಿ ತದನಂತರ ಅನೇಕ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಸಾವಿರಾರು ಮಕ್ಕಳಿಗೆ ವಿದ್ಯಾದಾನ ಮಾಡಿ, ಜೊತೆಗೆ ವೈದ್ಯರಾಗಿ ನೂರಾರು ಜೀವ ಉಳಿಸಿದ್ದಾರೆ.

ವೈದ್ಯರೆಂದರೆ ಎಂದರೆ ಎಲ್ಲರ ಸ್ನೇಹಿತ, ಎಲ್ಲರ ಜೀವ ಕಾಪಾಡುವ ನಾರಾಯಣ ಎಂದರೂ ಅತಿಶಯೊಕ್ತಿಯೇನಲ್ಲ. ಅದೇ ರೀತಿ ಅವರೊಬ್ಬ ಅಜಾತಶತ್ರು. ಶಿಕ್ಷಣ ಸಮಾಜಸೇವೆ, ರಾಜಕೀಯ ಎಲ್ಲ ರಂಗದಲ್ಲೂ ಎಲ್ಲರ ಪ್ರೀತಿ–ಅಭಿಮಾನಕ್ಕೆ ಪಾತ್ರರಾದವರು. ಆ ಪ್ರೀತಿ ಅಭಿಮಾನವೇ ಅವರನ್ನು, ಮತ್ತು ಅವರು ಕಟ್ಟಿದ ಶಿಕ್ಷಣ ಸಂಸ್ಥೆಗಳನ್ನು ಎತ್ತರಕ್ಕೆ ತೆಗೆದುಕೊಂಡು ಹೋಗಿದೆ. ನಂಬಿಕೆ, ವಿಶ್ವಾಸಕ್ಕೆ ಪಾತ್ರ ರಾಗುವಂತೆ ಮಾಡಿದೆ. ನಿರಂತರ ಪರಿಶ್ರಮ, ಸಮಾಜ ಹಿತ ಕಾಪಾಡುವ ಸಾರ್ಥಕ ಕಾಯಕದಿಂದಲೇ ಉನ್ನತ ಸ್ಥಾನ ಗಳಿಸಿದ್ದಾರೆ. ಇದರ ಹಿಂದೆ ದೇವತಾ ಅನುಗ್ರಹವಿದೆ. ಗುರು ಹಿರಿಯರ ಆಶೀರ್ವಾದವಿದೆ. ಎಲ್ಲಕ್ಕಿಂತ ಮಿಗಿಲಾಗಿ ಅವರ ಕುಟುಂಬದ ಸದಸ್ಯರ ತ್ಯಾಗವಿದೆ. ಸಹಕಾರವಿದೆ.

ಕಲೆ–ಶಿಕ್ಷಣ– ರಂಗಭೂಮಿ ನಾಟಕ ಸಾಹಿತ್ಯ ಹೀಗೆ ಎಲ್ಲವನ್ನು ಒಗ್ಗೂಡಿಸುವ, ಎಲ್ಲರನ್ನೂ ಸ್ನೇಹ– ಪ್ರೀತಿಯ ಬಂಧನದಲ್ಲಿ ಬೆಸೆಯುವ ಕಲ್ಪತರುನಾಡು ತುಮಕೂರನ್ನು ತಮ್ಮ ಕರ್ಮಭೂಮಿಯನ್ನಾಗಿ ಮಾಡಿ ಅವಿರತ ಕಾಯಕದ ಮೂಲಕ ಗುರುತಿಸಿಕೊಂಡಿದ್ದಾರೆ.

ಜನಹಿತ – ಸಮಾಜದ ಹಿತ , ಬಡವರ ಏಳಿಗೆಗಾಗಿ ಕೆಲಸ ಮಾಡುತ್ತಾ ಹೊರಟರೆ ದಾರಿಯಲ್ಲಿ ಅನೇಕಸನ್ಮಿತ್ರರು,ಸಹಪಾಠಿಗಳು, ಸಲಹೆಗಾರರು, ಹಿತೈಷಿಗಳು ಸಿಗುತ್ತಾರೆ. ಅವರ ಸಹಕಾರದಿಂದಲೇ ಏನು ಬೇಕಾದರೂ ಸಾಧಿಸಿ, ಗುರಿ ಮುಟ್ಟಬಹುದು ಮತ್ತು ಕೀರ್ತಿ– ಗೌರವ ಪಡೆಯಬಹುದು ಎಂಬುದಕ್ಕೆ ಹುಲಿನಾಯ್ಕರ್ ಬದುಕೇ ಸಾಕ್ಷಿ. ಜೀವಂತ ಉದಾಹರಣೆ. ಸಾಧಕ– ಕರ್ಮಯೋಗಿ ಕೊರಳಿಗೆ ಈಗ ಮತ್ತೊಂದು ಪ್ರಶಸ್ತಿ.

ಅದು ಹಿರಿಯ ಮುತ್ಸದ್ದಿ ಎಚ್. ಡಿ ದೇವೇಗೌಡ ಹೆಸರಿನ ಪ್ರಶಸ್ತಿ. ಬಾಬು ಜಗಜೀವನ್ ರಾಮ್ ಸಂಶೋಧನಾ ಸಭಾಂಗಣ ಕಿಕ್ಕಿರಿದು ತುಂಬಿತ್ತು. ಈ ಅಪರೂಪದ ಸನ್ನಿವೇಶಕ್ಕೆ ನಾಡಿನ ವಿವಿಧ ಮಠಾಧೀಶರು, ಸಾಧಕರು, ಗಣ್ಯರು ಮತ್ತು ಅಪಾರ ಸಂಖ್ಯೆಯ ಸಹಸ್ರಾರು ಅಭಿಮಾನಿಗಳು ಸಾಕ್ಷಿಯಾದರು.

# ಸಮೃದ್ಧಿಯೆಡೆಗೆ ಭಾರತ

▶▶ ಮೊದಲನೇ ಪುಟದಿಂದ

ಇದನ್ನು ಪ್ರಧಾನಿ ಅವರು ಹನ್ನೊಂದು ವರ್ಷಗಳಲ್ಲಿ ಸಾಧಿಸಿದ ಮಹೋನ್ನತ ಸಾಧನೆಯೆಂದರೆ ತಪ್ಪಿಲ್ಲ.



## ಆಡಿದ್ದನ್ನು ಮಾಡಿದವರು

ಪ್ರಧಾನಿ ಮೋದಿ ಅವರ ದೊಡ್ಡ ಹೆಗ್ಗಳಿಕೆ ಎಂದರೆ ಆಡಿದ್ದನ್ನು ಮಾಡಿ ತೋರಿಸುವುದು. ಅಗ್ಗದ ಪ್ರಚಾರ ಅಥವಾ ಪೊಳ್ಳು ಭರವಸೆಗಳನ್ನು ಅವರು ಕೊಡುವುದಿಲ್ಲ. ಶಂಕುಸ್ಥಾಪನೆಯ ದಿನದಂದು ಲೋಕಾರ್ಪಣೆಯ ದಿನವನ್ನು ಘೋಷಣೆ ಮಾಡುವ ಅತ್ಯಂತ ವಿರಳ ರಾಜಕೀಯ ಮುತ್ಸದ್ದಿ ಪ್ರಧಾನಿ ಮೋದಿ ಅವರು. ಇದಕ್ಕೆ ಜಗತ್ತಿನ ಅತಿದೊಡ್ಡ ಪ್ರತಿಮೆಯಿಂದ ಹಿಡಿದು ಭಾರತದ ಆಧುನಿಕ ಸಂಸತ್ತು ಭವನದ ತನಕ ಇದಕ್ಕೆ ಉದಾಹರಣೆ ಕೊಡಬಹುದು. 'ವಂದೇ ಭಾರತ್,' 'ಅಮೃತ್ ಭಾರತ್' ರೈಲುಸೇವೆಯನ್ನು ನೋಡಿದಾಗ ಪಾಶ್ಚಾತ್ಯ ದೇಶಗಳಿಗಿಂತ ಯಾವ ದೃಷ್ಟಿಯಿಂದಲೂ ನಾವು ಹಿಂದಿಲ್ಲ ಎನ್ನುವ ಹೆಮ್ಮೆ ನಮ್ಮದಾಗುತ್ತದೆ. ದೇಶದಲ್ಲಿ ಕಾಣುತ್ತಿರುವ 12–16 ಲೇನ್‌ಗಳ ರಸ್ತೆಯನ್ನು ನೋಡಿದಾಗ ಭಾರತ ಯಾರಿಗೂ ಕಡಿಮೆ ಇಲ್ಲ ಎನ್ನುವುದು ಅರಿವಾಗುತ್ತದೆ.

ದೇಶ ಆರ್ಥಿಕ ಪರಿಸ್ಥಿತಿಯನ್ನು ನಿಭಾಯಿಸುವುದರಲ್ಲಿ ಮೋದಿ ಅವರ ಸರ್ಕಾರ ಅತ್ಯಂತ ಸಮರ್ಥವಾಗಿದೆ. ಏಕೆಂದರೆ ಶೇಕಡ 70ರಷ್ಟು ರಾಷ್ಟ್ರಗಳು ಕೋವಿಡ್–19ರ ಹೊಡೆತದಿಂದ ಚೇತರಿಸಿಕೊಳ್ಳಲು ಇನ್ನೂ ಕಷ್ಟಪಡುತ್ತಿರುವಾಗ ಭಾರತ ಅತ್ಯಂತ ವೇಗವಾಗಿ ಚೇತರಿಸಿಕೊಂಡು ಇಡೀ ಜಗತ್ತು ಬೆರಗಾಗುವಂತಹ ಪ್ರಗತಿಯನ್ನು ಸಾಧಿಸಿತು. ಐಎಂಎಫ್‌ನ ವರದಿಯ ಪ್ರಕಾರ ಭಾರತದ ಜಿಡಿಪಿ 2019 ರಿಂದ 2024ರಲ್ಲಿ 44.78% ದಾಖಲಾಗಿದೆ.

ಪ್ರಧಾನಿ ಮೋದಿ ಅವರು 'ಸಬ್ ಕಾ ಸಾಥ್ ಸಬ್ ಕಾ ವಿಕಾಸ್' ಎನ್ನುವುದು ಭಾರತೀಯತೆಯ ಮೇಲೆ ಈ ದೇಶವನ್ನು ಸರ್ವಾಂಗೀಣವಾಗಿ ಮುನ್ನಡೆಸುವ ಘೋಷಣೆಯಾಗಿದೆ. ದೇಶವಾಸಿಗಳಲ್ಲಿ ಯಾವ ಭೇದ ಭಾವವನ್ನೂ ಮಾಡದೆ ಪ್ರಗತಿಯ ಪಥದಲ್ಲಿ ಎಲ್ಲರನ್ನೂ ತೆಗೆದುಕೊಂಡು ಹೋದರೆ ದೇಶ ತನ್ನಿಂದ ತಾನೇ ವಿಕಾಸವಾಗುತ್ತದೆ ಎಂಬ ತತ್ತ್ವದಲ್ಲಿ ಅವರಿಗೆ ಅಪಾರವಾದ ನಂಬಿಕೆಯಿದೆ.

## ಹೆಣ್ಣುಮಕ್ಕಳ ಸಾಮರ್ಥ್ಯಕ್ಕೆ ಆದ್ಯತೆ

ಹೆಣ್ಣು ಮಕ್ಕಳ ಕಲ್ಯಾಣವನ್ನು ಕುರಿತು ಪ್ರಧಾನಿ ಮೋದಿ ಅವರಿಗೆ ವಿಶೇಷ ಕಾಳಜಿ. ಅವರು ಅಧಿಕಾರ ವಹಿಸಿಕೊಂಡ ಕೂಡಲೇ 'ತ್ರಿವಳಿ ತಲಾಖ್' ಅನಿಷ್ಟ ಪದ್ಧತಿಗೆ ಕೊನೆ ಹಾಡಿದರು. ಅದರಿಂದಾಗಿ ಅನೇಕ ಮುಸ್ಲಿಂ ಹೆಣ್ಣುಮಕ್ಕಳ ಜೀವನದಲ್ಲಿ ಭದ್ರತೆ ಕಂಡುಬಂತು. ಹೆಣ್ಣುಮಕ್ಕಳ ರಕ್ಷಣೆ ಕುರಿತು ಪ್ರಧಾನಿ ಅವರು 'ಭೇಟಿ ಬಚಾವೋ, ಭೇಟಿ ಪಢಾವೋ' ಎನ್ನುವ ಘೋಷಣೆಯನ್ನು ದೇಶಕ್ಕೆ ಕೊಟ್ಟಿದ್ದಾರೆ. ಹೆಣ್ಣುಮಕ್ಕಳ ವಿಚಾರದಲ್ಲಿ ಅವರಿಗಿರುವ ಅಭಿಮಾನ ಎಷ್ಟು ದೊಡ್ಡದು ಎನ್ನುವುದಕ್ಕೆ ಉದಾಹರಣೆಯೆಂದರೆ ಪಹಲ್ಗಾಮ್ ಸೈನಿಕದಾಳಿಯ ವಿವರಗಳನ್ನು ಮಾಧ್ಯಮಕ್ಕೆ ವ್ಯೋಮಿಕಾ ಸಿಂಗ್ ಮತ್ತು ಸೋಫಿಯಾ ಖುರೇಷಿ ಎಂಬ ಇಬ್ಬರು ಮಹಿಳಾ ಸೇನಾಧಿಕಾರಿಗಳು ಕೊಟ್ಟರು. ಪ್ರಧಾನಮಂತ್ರಿಗಳಿಗೆ ಹೆಣ್ಣುಮಕ್ಕಳ ಶಕ್ತಿ ಮತ್ತು ಸಾಮರ್ಥ್ಯದಲ್ಲಿ ಅಪಾರವಾದ ನಂಬಿಕೆಯಿದೆ. ಆ ಮೂಲಕ ಭಾರತದ ಮಹಿಳೆಯರ ಗೌರವವನ್ನು ಆಗಸದ ಎತ್ತರಕ್ಕೆ ಅವರು ಏರಿಸಿದ್ದಾರೆ.

## ಭಯೋತ್ಪಾದನೆಗೆ ಶೂನ್ಯ ಸಹನೆ

ಭಯೋತ್ಪಾದನೆ ಮತ್ತು ದೇಶದ ಭದ್ರತೆಯ ಬಗ್ಗೆ ಚಿಂತನೆ ನಡೆಸಿ ಅತಿ ಕಠಿಣವಾದ ಕ್ರಮಗಳನ್ನು ಕೈಗೊಂಡ ಪ್ರಧಾನಿ ಅವರು ಯಾವಾಗಲೂ 'ದೇಶ ಮೊದಲು' ಎಂಬ ಧ್ಯೇಯವಾಕ್ಯವನ್ನು ಪಾಲಿಸಿಕೊಂಡು ಬಂದವರು. ಭಾರತದ ನೆಲ ಅಥವಾ ನಾಗರಿಕರ ಮೇಲೆ ಯಾವುದಾದರೂ ದುಷ್ಟಶಕ್ತಿಗಳು ಕಣ್ಣು ಹಾಕಿದರೆ ಅವರಿಗೆ ತಕ್ಕ ಉತ್ತರ ನೀಡುವಲ್ಲಿ ನಮ್ಮ ಸೇನೆ ಯಶಸ್ವಿಯಾಗಿದೆ. ಇವರ ಯಶಸ್ಸಿಗೆ ಬೆನ್ನೆಲುಬಾಗಿ ನಿಂತವರು ಪ್ರಧಾನಿ ಮೋದಿಯವರು. ಅವರ ದಿಟ್ಟನಾಯಕತ್ವದಲ್ಲಿ ಉರಿಯ ಸರ್ಜಿಕಲ್ ಸ್ಟ್ರೈಕ್, ಬಾಲಾಕೋಟ್‌ನ ಏರ್‌ಸ್ಟ್ರೈಕ್, ಹಾಗೂ ಆಪರೇಷನ್ ಸಿಂಧೂರ್‌ನಂತಹ ಸೈನಿಕ ಕಾರ್ಯಾಚರಣೆಗಳು ತುಂಬಾ ಉನ್ನತ ಮಟ್ಟದಲ್ಲಿ ಯಶಸ್ವಿಯಾಗಿದೆ.

## ರಾಜ್ಯತಾಂತ್ರಿಕತೆಯಲ್ಲಿ ಮೇಲುಗೈ

ಕೇವಲ ಸೈನ್ಯದ ಮೇಲೆ ಹೊರೆ ಹಾಕದೇ ಸಿಂಧೂನದಿ ನೀರಿನ ಹಂಚಿಕೆಯನ್ನು ಅಮಾನತಿನಲ್ಲಿಡುವ ಮೂಲಕ ಪಾಕಿಸ್ತಾನದ ವಿಚಾರದಲ್ಲಿ ರಾಜತಾಂತ್ರಿಕವಾಗಿ ಮೋದಿ ಅವರು ಮೇಲುಗೈ ಸಾಧಿಸಿದ್ದನ್ನು ನಾವು ನೋಡಿದ್ದೇವೆ. ಹಿಂದೆ ಇಂತಹ ದಿಟ್ಟ ನಿರ್ಧಾರಗಳನ್ನು ನಮ್ಮನ್ನಾಳುವವರು ತೆಗೆದುಕೊಂಡಿರಲಿಲ್ಲ. ವಿನಾಕಾರಣವಾಗಿ ದಾಳಿ ಮಾಡುವ ಪಾಕಿಸ್ತಾನಕ್ಕೆ ಮುಟ್ಟಿ ನೋಡಿಕೊಳ್ಳುವಂತಹ ಏಟನ್ನು ಕೊಟ್ಟಿರುವುದನ್ನು ಗಮನಿಸಬಹುದು. 'ನೆತ್ತರು ಮತ್ತು ನೀರು' ಎಂದೂ ಜೊತೆಯಾಗಿ ಹರಿಯದು ಎಂಬ ಸಂದೇಶ ರವಾನಿಸುವುದರ ಮೂಲಕ ಭಾರತದ ಸೈನಿಕರು ಮತ್ತು ನಾಗರಿಕರಲ್ಲಿ ಆತ್ಮಸ್ಥೈರ್ಯ ತುಂಬಿದ್ದಾರೆ.

'ಆತ್ಮನಿರ್ಭರ ಭಾರತ,' 'ಸ್ವಾವಲಂಬಿ ಭಾರತ,' 'ಮೇಕ್ ಇನ್ ಇಂಡಿಯಾ' ಮೊದಲಾದ ಯೋಜನೆಗಳಿಂದ ಭಾರತದ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಿದ್ದಾರೆ. ಇದನ್ನೆಲ್ಲಾ ನೋಡಿದಾಗ ಮತ್ತೊಮ್ಮೆ ಭಾರತವನ್ನು ಜಗತ್ತಿನ ದೊಡ್ಡ ಕೈಗಾರಿಕಾ ರಾಷ್ಟ್ರವನ್ನಾಗಿ ಮಾಡುವ ಅವರ ಕಾಳಜಿ ಎದ್ದು ಕಾಣುತ್ತಿದೆ. ಆಧುನಿಕ ಭಾರತದ ನಾಯಕರಲ್ಲಿ ಪ್ರಧಾನಿ ಮೋದಿಯವರು ಬಹಳ ಅಪರೂಪದ ನಾಯಕರೆಂದರೆ ತಪ್ಪಿಲ್ಲ.

ಇಂತಹ ನಾಯಕರು ತಮ್ಮ ದೇಶದ ಜನರಲ್ಲಿ ಆಸ್ಮಿತೆ, ಅರಿವು, ಹೆಮ್ಮೆ ಮತ್ತು ರಾಷ್ಟ್ರಾಭಿಮಾನ ಮೂಡಿಸುತ್ತಾರೆ ಎನ್ನುವುದು ನನ್ನ ಭಾವನೆ. ಸ್ವಾಮಿ ವಿವೇಕಾನಂದರಂತೆ ಪ್ರಧಾನಿ ಮೋದಿ ಅವರು ಸಹ ಜನಜಾಗೃತಿಯ ಕೆಲಸವನ್ನು ನಿರಂತರವಾಗಿ ಮಾಡುತ್ತಿದ್ದಾರೆ.

## ಸಮಾನತೆ ಮತ್ತು ಸಮ್ಮಾನತೆ

ದೇಶದಲ್ಲಿ ಎಲ್ಲರಿಗೂ ಸಮಾನತೆ ದೊರೆಯಬೇಕಾದರೆ ನಮಗೆ ಸಂವಿಧಾನ ನೆರವಾಗುತ್ತದೆ. ಸಮ್ಮಾನತೆ ದೊರೆಯಬೇಕಾದರೆ ಎಲ್ಲರ ಪಾಲ್ಗೊಳ್ಳುವಿಕೆ ಬಹಳ ಮುಖ್ಯ. ಇದರಲ್ಲಿ ವ್ಯಕ್ತಿಯ ಆಸಕ್ತಿ ಮತ್ತು ದುಡಿಮೆ ಗಣನೆಗೆ ಬರುತ್ತದೆ. ಇದಕ್ಕೆ ಯಾರ ಅಪ್ಪಣೆಯೂ ಬೇಡ, ಅಂತರಂಗದ ಮಾತು ಸಾಕು. ಬಹಿರಂಗವಾಗಿ ಜನರು ಗಂಟಲು ಹರಿಯುವಷ್ಟು ಕೂಗುವ ನಾಯಕರಿಗೆ ಅಂತರಂಗದಲ್ಲಿ ಅವರು ಕೂಗಿಕೊಂಡ ವಿಷಯದಲ್ಲಿ ಬದ್ಧತೆ ಇರಬೇಡವೇ? ಇಂದು ಸಾಮಾನ್ಯ ಜನರಿಗೂ ಸತ್ಯ ಗೊತ್ತಿರುವ ಕಾರಣ ಬದ್ಧತೆಯಿಲ್ಲದ ನಾಯಕರಿಗೆ ಅವರು ಮನದಲ್ಲೇ ಶಾಪ ಹಾಕುತ್ತಾರೆ. ಶಿವಶರಣರು ಹೇಳುವಂತೆ ಅಂತರಂಗ ಬಹಿರಂಗಗಳೆರಡೂ ಒಂದಾದಾಗ ಮಾತ್ರ ಪೂರ್ಣಫಲ ದೊರೆಯುತ್ತದೆ. ಇದರ ಸಂಗಮವನ್ನೇ ಸಮ್ಮಾನತೆ ಎನ್ನುವುದು. ಇದನ್ನು ಸಾಧಿಸಿದಾಗ ಸಹಜವಾಗಿ ಗುರಿ ಮುಟ್ಟಲು ಸಾಧ್ಯವಾಗುತ್ತದೆ. ಗುರಿ ಮುಟ್ಟಿದಾಗ ಎಲ್ಲರಿಂದಲೂ ದೊರೆಯುವ ಪ್ರಶಂಸೆಯೇ ಸರ್ವಮಾನ್ಯತೆ. ಕಳೆದ ಹನ್ನೊಂದು ವರ್ಷದಲ್ಲಿ ಮೋದಿ ಸರ್ಕಾರವು ದೃಢ ಸಂಕಲ್ಪದೊಂದಿಗೆ ಸಾಧನೆಯ ಕಡೆಗೆ ಹೆಜ್ಜೆ ಹಾಕಿದೆ. ಅದಕ್ಕಾಗಿ ಪ್ರಧಾನಿ ಮೋದಿಜಿ ಅವರು ದೇಶದ ಸರ್ವಮಾನ್ಯ ನಾಯಕರಾಗಿ ಶ್ರೀಸಾಮಾನ್ಯರ ಮನಸಿನಲ್ಲಿ ರಾರಾಜಿಸುತ್ತಿದ್ದಾರೆ.

# ಭಾರತದ ಸಕರಾತ್ಮಕ ಆರ್ಥಿಕ ಪ್ರಗತಿ

▶▶ 2ನೇ ಪುಟದಿಂದ

ಉದಾಹರಣೆಗೆ, 2018 ಮತ್ತು 2022ರ ನಡುವಿನ ಅವಧಿಯಲ್ಲಿ ಭಾರತವು ಅಮೆರಿಕಾ ದೇಶಕ್ಕೆ ಮಾಡಿದ ರಫ್ತಿನ ಪ್ರಮಾಣದಲ್ಲಿ ಶೇ. 44ರಷ್ಟು ಹೆಚ್ಚಳವಾಗಿದ್ದರೆ, ಇದೇ ಅವಧಿಯಲ್ಲಿ ಚೀನಾದೇಶವು ಅಮೆರಿಕಾ ದೇಶಕ್ಕೆ ಮಾಡಿದ ರಫ್ತಿನ ಪ್ರಮಾಣದಲ್ಲಿ ಶೇ. 10ರಷ್ಟು ಇಳಿತವಾಗಿದೆ.

## ದೇಶದ ಮುಂದಿರುವ ಮಾರ್ಗ

ನಗರೀಕರಣ ಮತ್ತು ಜನತೆಯ ಹೆಚ್ಚಿನ ಆದಾಯ – ಇವುಗಳಿಂದ ಕಂಪ್ಯೂಟರ್, ಫೋನ್, ಟಿವಿ, ಅಡುಗೆಮನೆಗೆ ಬೇಕಾದ ಉಪಕರಣಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಇದರಿಂದ ಉತ್ಪಾದನಾಕ್ಷೇತ್ರಕ್ಕೆ ಉತ್ತೇಜನ ದೊರೆಯುತ್ತದೆ. ಕೇಂದ್ರ ಸರ್ಕಾರವು ಎಲೆಕ್ಟ್ರಾನಿಕ್ಸ್ ವಸ್ತುಗಳ ಉತ್ಪಾದನೆಗೆ ಅನುಕೂಲವಾಗುವಂತೆ ಎಲೆಕ್ಟ್ರಾನಿಕ್ಸ್ ಮ್ಯಾನುಫ್ಯಾಕ್ಚರಿಂಗ್ ಕ್ಲಸ್ಟರ್‌ಗಳ ಸ್ಥಾಪನೆ, ವಿಶೇಷ ಪ್ರೋತ್ಸಾಹ ಪ್ಯಾಕೇಜುಗಳ ಮೂಲಕ ಪ್ರೋತ್ಸಾಹವನ್ನು ನೀಡುತ್ತಿದೆ. ಅಲ್ಲದೆ, ಆಮದಿನ ಮೇಲಿನ ಸುಂಕವನ್ನು ಕಡಿತಗೊಳಿಸಿದೆ, ಕೆಲವು ಭಾಗಗಳ ಮೇಲಿನ ತೆರಿಗೆಯನ್ನು ಕೂಡ ಕಡಮೆಮಾಡಿದೆ. ಈ ಕ್ರಮಗಳಿಂದ 'ಭಾರತದಲ್ಲಿಯೇ ತಯಾರಿಸಿ' ಉಪಕ್ರಮಕ್ಕೆ ಹೆಚ್ಚಿನ ಬಲ ದೊರೆಯುತ್ತಿದೆ.

ಇಷ್ಟಾದರೂ ನಮ್ಮಲ್ಲಿ ಕೆಲವು ಅಡಚಣೆಗಳಿವೆ. ಮೂಲಸೌಕರ್ಯವನ್ನು ಒದಗಿಸುವ ಯೋಜನೆಗಳನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕು, ಸಾರಿಗೆ ಮತ್ತು ಲಾಜಿಸ್ಟಿಕ್ಸ್ ವಲಯವನ್ನು ಸುಧಾರಿಸಬೇಕು, ಎಲ್ಲಾ ರಾಜ್ಯಗಳೂ ಕೇಂದ್ರದೊಂದಿಗೆ ಸಹಕರಿಸಬೇಕು. ವಿದೇಶಗಳಿಗೆ ಪೂರೈಸಬೇಕಾದ ಪದಾರ್ಥಗಳ ಗುಣಮಟ್ಟವನ್ನು ಕಾಯ್ದುಕೊಂಡು ಸಮಯಕ್ಕೆ ಸರಿಯಾಗಿ ಸರಬರಾಜು ಮಾಡಬೇಕೆಂಬ ಪ್ರಜ್ಞೆಯನ್ನು ಕೈಗಾರಿಕೆ ಮತ್ತು ಸೇವಾಕ್ಷೇತ್ರಗಳಲ್ಲಿ ಮೂಡಿಸಬೇಕು.

ಇವೆಲ್ಲದರ ಜೊತೆಗೆ ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ತಾಂತ್ರಿಕ ಕೌಶಲದ ಅಭಿವೃದ್ಧಿಗೆ ಆದ್ಯತೆಯನ್ನು ನೀಡಬೇಕು. ಈ ನಿಟ್ಟಿನಲ್ಲಿ ತುಮಕೂರಿನ ಶ್ರೀದೇವಿ ಇಂಜನಿಯರಿಂಗ್ ಕಾಲೇಜು ಇತರ ಕಾಲೇಜುಗಳಿಗೆ ಉತ್ತಮ ಮಾದರಿಯಾಗಿದೆ.

ಇನ್ನೊಂದು ಅಡಚಣೆಯೆಂದರೆ, ಕೆಲರಾಷ್ಟ್ರಗಳು ಭಾರತದಿಂದ ಆಮದು ಮಾಡಿಕೊಳ್ಳುವ ಪದಾರ್ಥಗಳ ಮೇಲೆ ಹಾಕಿರುವ ಸುಂಕಗಳು. ಇವು ರಾಜಕೀಯವಾಗಿ ಪ್ರೇರಿತವಾಗಿರುವಂತಹವು. ಆದರೂ, ಇಂದು ನಮ್ಮ ರಾಜತಾಂತ್ರಿಕಶಕ್ತಿ ಅತ್ಯುತ್ತಮವಾಗಿರುವುದರಿಂದ ಇಂತಹ ಸಮಸ್ಯೆಗಳು ಶೀಘ್ರದಲ್ಲಿಯೇ ನಿವಾರಣೆಯಾಗಬಹುದು ಎಂಬ ನಿರೀಕ್ಷೆ ಇದೆ.

ಆದರೆ, ಭಾರತವು ಇಂತಹ ಸುವರ್ಣಾವಕಾಶವನ್ನು ಹೊಂದಿರುವ ಸಮಯದಲ್ಲಿಯೂ ಕೆಲವರು ಕೇವಲ ಇಂತಹ ಅಂಕಿ ಅಂಶಗಳಿಂದ ನಮ್ಮ ಬಡ ಜನಗಳಿಗೆ ಆಗುವ ಪ್ರಯೋಜನವಾದರೂ ಏನು ಎಂದು ಕೇಳಬಹುದು. ಅದಕ್ಕೆ ಉತ್ತರವಾಗಿ ವಿಶ್ವ ಬ್ಯಾಂಕ್ ತನ್ನ ಇತ್ತೀಚಿನ ವರದಿಯಲ್ಲಿ ಹೇಳಿರುವ ಅಂಶಗಳನ್ನು ಗಮನಿಸಬೇಕು. 2011–12ರಲ್ಲಿ 27.1%ರಷ್ಟು ಇದ್ದ ದಟ್ಟ ದಾರಿದ್ರ್ಯದ ಪ್ರಮಾಣವನ್ನು ಭಾರತವು 2022–23ರ ವೇಳೆಗೆ 5.3%ಗೆ ಇಳಿಸಿದೆ. ಅಂದರೆ, ಸುಮಾರು 269 ದಶಲಕ್ಷ ಜನರನ್ನು ದಟ್ಟ ದಾರಿದ್ರ್ಯದಿಂದ ಮೇಲಕ್ಕೆ ಎತ್ತಿದೆ ಎಂಬುದನ್ನು ಈ ಅಂಕಿಅಂಶವು ಸೂಚಿಸಿದೆ. ಇಂತಹ ಅದ್ಭುತ ಸಾಧನೆಗಾಗಿ ಕೇಂದ್ರ ಸರ್ಕಾರವನ್ನು 'ಶ್ರೀದೇವಿ ಅಂತರಂಗ'ವು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ.



ಚಿತ್ರದಲ್ಲಿ ಡಾ. ಎಂ.ಆರ್. ಹುಲಿನಾಯ್ಕರ್, ಡಾ. ರಸ್ಮಿ ಪಲಸ್ಸೆರಿ, ಟಿ.ಎಸ್. ರಾಜೇಶ್, ಡಾ. ಕೆ. ಮೋಹನ್ ಕುಮಾರ್, ಎಸ್. ಅಶೋಕ್‌ಕುಮಾರ್, ಎಂ.ಎಸ್. ಪಾಟೀಲ್ ಮತ್ತು ಡಾ. ಲಾವಣ್ಯ ರಮಣ್ ಹುಲಿನಾಯ್ಕರ್.

# ಶ್ರೀದೇವಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯಲ್ಲಿ ಹೆಮಟಾಲಜಿ ಕ್ಲಿನಿಕ್ ಪ್ರಾರಂಭ

"ರಕ್ತ ಸಂಬಂಧಿ ಕಾಯಿಲೆಗಳಿಗೆ ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಇಂದಿನಿಂದ ಅತ್ಯುತ್ತಮ ಚಿಕಿತ್ಸಾ ಸೌಲಭ್ಯ ಲಭ್ಯವಾಗಲಿದೆ" ಎಂದು ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್‌ರವರು ತಿಳಿಸಿದರು. ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ವತಿಯಿಂದ ಬೆಂಗಳೂರಿನ ಎಂ.ಎಸ್. ರಾಮಯ್ಯ ಮೆಮೋರಿಯಲ್ ಆಸ್ಪತ್ರೆಯ ಜಂಟಿ ಸಹಯೋಗದಲ್ಲಿ ಹೆಮಟಾಲಜಿ ಕ್ಲಿನಿಕ್‌ನ ಉದ್ಘಾಟನೆಯನ್ನು ಜೂನ್ 2ರಂದು ಹಮ್ಮಿಕೊಳ್ಳಲಾಗಿತ್ತು.

"ಈ ಸೇವೆ ಪ್ರತಿ ತಿಂಗಳ ಮೊದಲ ಹಾಗೂ ಮೂರನೇ ಸೋಮವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಲಭ್ಯವಿರುತ್ತದೆ. ರಕ್ತ ಸಂಬಂಧಿ ಕಾಯಿಲೆಗಳು ಹಾಗೂ ಇನ್ನಿತರ ಸಮಸ್ಯೆಗಳಿಗೆ ತಜ್ಞ ವೈದ್ಯರಿಂದ ಗುಣಮಟ್ಟದ ಚಿಕಿತ್ಸೆ ದೊರೆಯುತ್ತದೆ. ತುಮಕೂರು ಜಿಲ್ಲೆಯವರು ಈ ಸೇವೆಯನ್ನು ಸದುಪಯೋಗಪಡಿಸಿಕೊಳ್ಳಬೇಕು. ಬೇರೆ-ಬೇರೆ ವಿಭಾಗದ ವೈದ್ಯಕೀಯ ತಜ್ಞರೊಂದಿಗೆ ಸಮಾಲೋಚನೆ ನಡೆಸಿ ಗುಣಮಟ್ಟದ ಚಿಕಿತ್ಸೆ ಕಲ್ಪಿಸಲಾಗುತ್ತದೆ. ಕೇಂದ್ರ, ರಾಜ್ಯ ಸರ್ಕಾರದ ಎಲ್ಲ ಅರೋಗ್ಯ ವಿಮಾ ಯೋಜನೆಗಳ ಸೌಲಭ್ಯ ಇದಕ್ಕೂ ಅನ್ವಯವಾಗಲಿದೆ. ಬಡವರು ಮತ್ತು ಜನಸಾಮಾನ್ಯರಿಗೆ ರಿಯಾಯಿತಿ ದರದಲ್ಲಿ ಚಿಕಿತ್ಸೆ ಲಭ್ಯವಿದೆ" ಎಂದು ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಅವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ.

ಇದೇ ಸಂದರ್ಭದಲ್ಲಿ ಬೆಂಗಳೂರಿನ ಎಂ.ಎಸ್.ರಾಮಯ್ಯ ಇನ್ಸ್ಟಿಟ್ಯೂಟ್ ಆಫ್ ಆಂಕೋಸೈನ್ ಮತ್ತು ರಾಮಯ್ಯ ಮೆಮೋರಿಯಲ್ ಆಸ್ಪತ್ರೆಯ ಪೀಡಿಯಾಟಿಕ್ ಆಂಕೊಲಾಜಿ ಮತ್ತು ಬಿ.ಎಂ.ಟಿ. ವೈದ್ಯರಾದ ಡಾ. ರಸ್ಮಿ ಪಲಸ್ಸೆರಿ ಅವರು "ಕ್ಯಾನ್ಸರ್ ಸೇರಿದಂತೆ ರಕ್ತ ಸಂಬಂಧಿ ಕಾಯಿಲೆಗಳಿಗೆ ಹೊರರೋಗಿ ಚಿಕಿತ್ಸಾ ವಿಭಾಗವನ್ನು ಇಂದಿನಿಂದ ಆರಂಭಿಸಲಾಗಿದೆ. ರಕ್ತಕ್ಕೆ ಸಂಬಂಧಿಸಿದ ಕೆಲ ಕಾಯಿಲೆಗಳು ಹಾಗೂ ಕ್ಯಾನ್ಸರ್‌ಗೆ ಚಿಕಿತ್ಸೆಯನ್ನು ಇಲ್ಲಿ ಒದಗಿಸಲಾಗುವುದು. ಬೆಂಗಳೂರಿನ ಎಂ.ಎಸ್. ರಾಮಯ್ಯ ಮೆಡಿಕಲ್ ಕಾಲೇಜು ಹೆಮಟಾಲಜಿ ವಿಭಾಗದಲ್ಲಿ ಕಳೆದ ಎರಡು ದಶಕಗಳಿಂದ ರೋಗಿಗಳಿಗೆ ಅತ್ಯುತ್ತಮ ಚಿಕಿತ್ಸೆ ಒದಗಿಸಲಾಗುತ್ತಿದೆ. ನಾವು ಸುಮಾರು 200ಕ್ಕೂ ಹೆಚ್ಚು ಬೋನ್‌ಮ್ಯಾರೋ ಚಿಕಿತ್ಸೆ ನೀಡಿ ಹೊಸ ದಾಖಲೆ ನಿರ್ಮಿಸಿದ್ದೇವೆ" ಎಂದರು.

ರಾಮಯ್ಯ ಮೆಮೋರಿಯಲ್ ಆಸ್ಪತ್ರೆಯ ಟಿ.ಎಸ್.ರಾಜೇಶ್ ಅವರು "ರಾಮಯ್ಯ ಆಸ್ಪತ್ರೆಯೂ ಅತ್ಯಾಧುನಿಕ ಕ್ಯಾನ್ಸರ್ ವಿಭಾಗವನ್ನು ಹೊಂದಿದೆ. ಶ್ರೀದೇವಿ ಆಸ್ಪತ್ರೆಯಲ್ಲಿ ಪ್ರಾರಂಭಿಸಿರುವ ಕ್ಯಾನ್ಸರ್ ಕೇಂದ್ರವು ಗ್ರಾಮೀಣ ಸಮುದಾಯ ಆರೋಗ್ಯ ಚಿಕಿತ್ಸೆಯ ಆವಶ್ಯಕತೆಯನ್ನು ಪೂರೈಸುತ್ತದೆ. ಇದೊಂದು ಮಹತ್ತ್ವ ಪೂರ್ಣ ಹೆಜ್ಜೆಯಾಗಿದೆ. ಗ್ರಾಮೀಣ ಪ್ರದೇಶದ ಎಲ್ಲಾ ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕು" ಎಂದರು.

ಶ್ರೀದೇವಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ. ಕೆ. ಮೋಹನ್ ಕುಮಾರ್ ಅವರು "ತುಮಕೂರು ಜನತೆಗೆ ಇದೊಂದು ಸುವರ್ಣ ಅವಕಾಶ. ಹೀಗಾಗಿ ತುಮಕೂರು, ತುಮಕೂರು ತಾಲ್ಲೂಕು, ಹಾಗೂ ಸುತ್ತಮುತ್ತಲ ಜಿಲ್ಲೆಗಳ ಜನರು ಈ ಚಿಕಿತ್ಸಾ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಬೇಕು" ಎಂದು ಕರೆ ಕೊಟ್ಟರು.

# ಶ್ರೀದೇವಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಐಇಇಇ (I.E.E.E) ಘಟಕ

"ಎಂಜಿನಿಯರಿಂಗ್ ವಿದ್ಯಾರ್ಥಿಗಳಲ್ಲಿ ನಾವೀನ್ಯ, ಸಹಭಾಗಿತ್ವ ಮತ್ತು ತಾಂತ್ರಿಕ ಉತ್ಕೃಷ್ಟತೆಯನ್ನು ಉತ್ತೇಜಿಸುವಲ್ಲಿ ಐಇಇಇ (I.E.E.E) (ಇನ್‌ಸ್ಟಿಟ್ಯೂಟ್ ಆಫ್ ಎಲೆಕ್ಟ್ರಾನಿಕ್ಸ್ ಅಂಡ್ ಎಲೆಕ್ಟ್ರಾನಿಕ್ ಎಂಜಿನಿಯರ್ಸ್) ವಿದ್ಯಾರ್ಥಿ ಘಟಕ ಸ್ಥಾಪನೆ ಬಹಳ ಮುಖ್ಯವಾದ ಸಂಗತಿ. ಅದು ವಿದ್ಯಾರ್ಥಿಗಳ ಭವಿಷ್ಯದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ" ಎಂದು ನಿಟ್ಟೆ ಮೀನಾಕ್ಷಿ ಟೆಕ್ನಾಲಜಿ ಇನ್‌ಸ್ಟಿಟ್ಯೂಟ್‌ನ ಇಸಿಇ ಮುಖ್ಯಸ್ಥ ಡಾ. ಬಿ.ಡಿ. ಪರಮೇಶಾಚಾರಿ ಅಭಿಪ್ರಾಯಪಟ್ಟಿದ್ದಾರೆ.

ಮೇ 26ರಂದು ಶ್ರೀದೇವಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಐಇಇಇ ವಿದ್ಯಾರ್ಥಿ ಘಟಕದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು "ಐಇಇಇ ಅಡಿಯಲ್ಲಿ ಸ್ಥಾಪನೆಯಾಗಿರುವ ಕಂಪ್ಯೂಟರ್ ಸೊಸೈಟಿ, ಪವರ್ ಅಂಡ್ ಎನರ್ಜಿ ಸೊಸೈಟಿ, ಸಿಗ್ನಲ್ ಪ್ರೊಸೆಸಿಂಗ್ ಸೊಸೈಟಿ ಇತ್ಯಾದಿಗಳು ಮೌಲಿಕ ಕೊಡುಗೆ ನೀಡುತ್ತಿವೆ. ಕ್ಷೇತ್ರ ನಿರ್ದಿಷ್ಟ ಜ್ಞಾನ, ಅಂತರಶಿಸ್ತೀಯ ಸಂಶೋಧನೆಗೆ ಉತ್ತೇಜನ ಹಾಗೂ ವೃತ್ತಿಪರ ಸಂಪರ್ಕ ಜಾಲ ಸೃಷ್ಟಿಸಲು ಇವುಗಳಿಂದ ಹೆಚ್ಚಿನ ಅನುಕೂಲವಾಗುತ್ತಿದೆ.

"ಸೊಸೈಟಿಯ ಘಟಕದ ವಿದ್ಯಾರ್ಥಿಗಳು ಈ ವ್ಯವಸ್ಥೆಯನ್ನು ಸದುಪಯೋಗ ಮಾಡಿಕೊಂಡು ತಮ್ಮ ಶೈಕ್ಷಣಿಕ ಜ್ಞಾನ ಹೆಚ್ಚಿಸಿಕೊಳ್ಳಬೇಕು. ಐಇಇಇ ವತಿಯಿಂದ ನಡೆಯುವ ಕಾರ್ಯಾಗಾರ, ಹ್ಯಾಕಥಾನ್, ಸಹಭಾಗಿತ್ವದ ಪ್ರಾಜೆಕ್ಟ್‌ಗಳು ಹಾಗೂ ಸಾಮಾಜಿಕ ಉಪಕ್ರಮಗಳಲ್ಲಿ ಸ್ವಯಂಪ್ರೇರಣೆಯಿಂದ ಪಾಲ್ಗೊಳ್ಳಬೇಕು" ಎಂದು ಅವರು ವಿದ್ಯಾರ್ಥಿಗಳಿಗೆ ಕರೆಕೊಟ್ಟರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಐಇಇಇ ಬೆಂಗಳೂರು ವಿಭಾಗದ ಸಹ-ಅಧ್ಯಕ್ಷ ಪ್ರೊ. ದೇವೇಂದ್ರ ಗೌಡ ಅವರು "ಶೈಕ್ಷಣಿಕ, ನಾಯಕತ್ವ, ತಾಂತ್ರಿಕ ಹಾಗೂ ಸಾಮಾಜಿಕ ಕೊಡುಗೆಗಳನ್ನು ದೃಷ್ಟಿಯಲ್ಲಿರಿಸಿಕೊಂಡು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಐಇಇಇ ಹಲವು ಪುರಸ್ಕಾರ ನೀಡುತ್ತಿದೆ" ಎಂದರು.

ವಿದ್ಯಾರ್ಥಿ ವೃತ್ತಿಜೀವನವನ್ನು ರೂಪಿಸುವಲ್ಲಿ ಐಇಇಇ ಸಂಸ್ಥೆಯ ಮಹತ್ವವನ್ನು ತಿಳಿಸುತ್ತಾ, ಕಾಲೇಜಿನ ಪ್ರಾಂಶುಪಾಲರಾದ ಡಾ. ನರೇಂದ್ರ ವಿಶ್ವನಾಥ ಅವರು ವಿದ್ಯಾರ್ಥಿಗಳು ತಮ್ಮ ತಾಂತ್ರಿಕ ಮತ್ತು ನಾಯಕತ್ವ ಕೌಶಲಗಳನ್ನು ಹೆಚ್ಚಿಸಲು ಐಇಇಇ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಶಾಖೆಯ ಸ್ಥಾಪನೆಯ ಹಿಂದಿನ ಪ್ರಯತ್ನ ಶ್ಲಾಘನೀಯ" ಎಂದರು.

ಐಇಇಇ ಶಾಖೆಯ ಮುಖ್ಯಸ್ಥರಾದಂತಹ ಡಾ. ಎಂ. ಪ್ರಸನ್ನಕುಮಾರ್ ಮಾತನಾಡಿ "ಐಇಇಇ ಶಾಖೆಯ ಉದ್ದೇಶ ಮುಖ್ಯವಾಗಿ ವಿದ್ಯಾರ್ಥಿಗಳಲ್ಲಿ ಐಇಇಇಯ ಬಗೆಗಿನ ದೃಷ್ಟಿಕೋನ, ತಾಂತ್ರಿಕ ಶ್ರೇಷ್ಠತೆ, ನಾವೀನ್ಯ ಮತ್ತು ವೃತ್ತಿಪರ ಬೆಳವಣಿಗೆಯನ್ನು ಸಾಧಿಸುವುದಾಗಿದೆ. ಹೀಗಾಗಿ ವಿದ್ಯಾರ್ಥಿಗಳ ಬದುಕಿನಲ್ಲಿ ಅದರ ಪಾತ್ರ ಪ್ರಮುಖವಾದದು" ಎಂದು ತನ್ನ ಪ್ರಾಸ್ತಾವಿಕ ನುಡಿಯಲ್ಲಿ ತಿಳಿಸಿದರು.

ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ಡಾ. ಎಂ.ಆರ್. ಹುಲಿನಾಯ್ಕರ್ ಅತಿಥಿಗಳನ್ನು ಸನ್ಮಾನಿಸಿದರು. ಡಾ. ರಮಣ್ ಎಂ. ಹುಲಿನಾಯ್ಕರ್, ಎಂ.ಎಸ್. ಪಾಟೀಲ್, ಶ್ರೀಮತಿ ಅಂಬಿಕಾ ಎಂ. ಹುಲಿನಾಯ್ಕರ್, ಡಾ. ಲಾವಣ್ಯ ರಮಣ, ಡಾ. ಚಂದ್ರಶೇಖರ್ ಮತ್ತು ಡಾ. ಹೆಚ್.ಕೆ. ಭಾರ್ಗವ ಶುಭ ಹಾರೈಸಿದರು.



# ಪ್ರೀತಿ ಹಾಗೂ ವಿದ್ಯೆ ಅಕ್ಷಯ ಪಾತ್ರೆಯಿದ್ದಂತೇ!

'ಪ್ರೀತಿ ಮತ್ತು ವಿದ್ಯೆ ಹಂಚಿದಷ್ಟು ವೃದ್ಧಿಯಾಗುತ್ತದೆ. ಅದೊಂದು ಅಕ್ಷಯ ಪಾತ್ರೆ' ಎಂದು ತುಮಕೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ಮತ್ತು ಸಂಶೋಧನಾ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ನಾಗಭೂಷಣ್ ಬಗ್ಗನಡು ಅಭಿಪ್ರಾಯಪಟ್ಟಿದ್ದಾರೆ.

ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ ಮೇ 26 ರಂದು ಜರುಗಿದ "ಅಂಚೆಯವನು ನಮ್ಮಪ್ಪ" ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡುತ್ತಿದ್ದರು.

"ಮಾನವೀಯ ಸಂಬಂಧಗಳು ಗಟ್ಟಿಯಾಗಬೇಕಾದರೆ, ಅದಕ್ಕೆ ಹೆಚ್ಚಿನ ಮೌಲ್ಯ ಸಿಗಬೇಕಾದರೆ, ಮನುಷ್ಯತ್ವ, ಅಂತಃಕರಣದ ಸಂಬಂಧಗಳು ರಕ್ತದ ಕಣಕಣದಲ್ಲಿ ಆಳವಾಗಿ ಬೇರೂರಬೇಕು. ಇದಕ್ಕೆ ಕೌಟುಂಬಿಕ ವಾತಾವರಣ, ಪರಿಸರ ಮುಖ್ಯವಾಗಿರುತ್ತದೆ.

"ಬೇಬಿ ಕೇರ್ ಸೆಂಟರ್‌ನಲ್ಲಿ ಬೆಳೆದ ಮಕ್ಕಳು ಮುಂದೆ ತಂದೆ ತಾಯಿಯರನ್ನು ವೃದ್ಧಾಶ್ರಮಕ್ಕೆ ಸೇರಿಸುವುದಕ್ಕೆ ಆದ್ಯತೆ ಕೊಡುತ್ತಾರೆ. ನಾವು ಏನು ಕೊಡುತ್ತೇವೆಯೋ ಅದನ್ನೇ ನಮ್ಮ ಮಕ್ಕಳು ನಮಗೆ ಬಳುವಳಿಯಾಗಿ ಹಿಂತಿರುಗಿಸುತ್ತಾರೆ. ಹೀಗಾಗಿ ಮಕ್ಕಳಿಗೆ ಕೌಟುಂಬಿಕ ವಾತಾವರಣದ ಕೊರತೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ತಂದೆ, ತಾಯಿಗಳಿಗೆ ಬಹಳ ಮುಖ್ಯವಾಗಿರುತ್ತದೆ. ಬೇಬಿ ಸೆಂಟರ್‌ಗಳು ಹೆಚ್ಚಾದಷ್ಟು ವೃದ್ಧಾಶ್ರಮಗಳ ಸಂಖ್ಯೆಯೂ ಹೆಚ್ಚಾಗುತ್ತದೆ" ಎಂದು ಡಾ. ನಾಗಭೂಷಣ ಬಗ್ಗನಡು ಅವರು ಅಭಿಪ್ರಾಯಪಟ್ಟರು.



ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಮಾತನಾಡುತ್ತಾ "ಕೋವಿಡ್ ಸಂದರ್ಭದಲ್ಲಿ ಅಂಚೆ ಇಲಾಖೆ ಸಿಬ್ಬಂದಿ ನಿರ್ವಹಿಸಿದ ಪಾತ್ರ ಮರೆಯಲಾಗದು. ಮಾನವೀಯ ಸಂಬಂಧಗಳು ಕಡಿಮೆಯಾಗುತ್ತಿರುವ ಇಂದಿನ ದಿನಮಾನಗಳಲ್ಲಿ ರಸಾಯನಶಾಸ್ತ್ರದ ವಿಜ್ಞಾನಿ ಡಾ. ಕೆ.ಎಲ್. ದೇವರಾಜು ಅವರು ತಮ್ಮ ತಂದೆಯನ್ನು ಕುರಿತು ಹೊರತಂದಿರುವ ಈ ಕೃತಿ ಸಮಾಜದ ಕಣ್ಣು ತೆರೆಸಬೇಕು.

"1854ರಲ್ಲಿ ಡಾಲ್‌ಹೌಸಿ ಅವರಿಂದ ಸ್ಥಾಪನೆಗೊಂಡ ಭಾರತೀಯ ಅಂಚೆ ಇಲಾಖೆಗೆ 170 ವರ್ಷಗಳ ಸುದೀರ್ಘ ಇತಿಹಾಸವಿದೆ. ಕೇವಲ ಪತ್ರ ವಿತರಣೆ ಮತ್ತು ಉಳಿತಾಯ ಖಾತೆಯನ್ನು ನಿರ್ವಹಣೆ ಮಾಡುವುದಲ್ಲದೆ, ಸಮಾಜಕ್ಕೆ ಬಹುಮುಖಿಯಾಗಿ ವೈವಿಧ್ಯಮಯ ರೂಪದಲ್ಲಿ ಭಾರತೀಯ ಅಂಚೆ ಇಲಾಖೆ ಸೇವೆ ಸಲ್ಲಿಸುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಾಮಾಜಿಕ ಯೋಜನೆಗಳ ಗರಿಷ್ಠ ಲಾಭವನ್ನು ಗ್ರಾಮೀಣ ಜನರ ಮನೆಯ ಬಾಗಿಲಿಗೆ ತಲುಪಿಸುವಲ್ಲಿ ಅಂಚೆ ಇಲಾಖೆಯ ಪಾತ್ರ ಮುಖ್ಯವಾಗಿದೆ. ಅಂಚೆ ಇಲಾಖೆಯಲ್ಲಿ ಸೇವೆ ಸಲ್ಲಿಸಿ ಬದುಕು ಕಟ್ಟಿಕೊಂಡವರ ಅನುಭವವನ್ನು ಪುಸ್ತಕ ರೂಪದಲ್ಲಿ ಹೊರತಂದಿರುವುದು ನಿಜಕ್ಕೂ ಶ್ಲಾಘನೀಯವಾದ ಕೆಲಸ" ಎಂದು ಅವರು ಅಭಿಪ್ರಾಯಪಟ್ಟರು.

ಪುಸ್ತಕ ಕುರಿತು ತುಮಕೂರಿನ ಅಂಚೆ ಕಛೇರಿ ಅಧೀಕ್ಷಕ ಬಿ.ಎಂ. ಶಂಕರಪ್ಪ ಹಾಗೂ ಅಂಚೆ ಇಲಾಖೆಯ ನಿವೃತ್ತ ಅಧಿಕಾರಿ ನಾಗಲಕ್ಷ್ಮೀ ಹಾಗೂ ಕೃತಿಯ ಲೇಖಕ ಡಾ. ಕೆ.ಎಲ್. ದೇವರಾಜು ಅವರು ಮಾತನಾಡಿದರು. ಇದೇ ಸಂದರ್ಭದಲ್ಲಿ ಕೆಲವು ನಿವೃತ್ತ ಅಂಚೆ ನೌಕರರನ್ನು ಸನ್ಮಾನಿಸಲಾಯಿತು.

▪ ವರದಿ: ಕೆ.ಎಸ್. ರಾಜಮನ್ನಾರ್

# ಬಾನು ಕೃತಿಗೆ ಬುಕರ್

## ನೆಲದ ಸೊಗಡಿನ ಹೋರಾಟದ ಧ್ವನಿಗೆ ಸಂದ ಗರಿಮೆ

▪ ಬಿ.ಎಸ್. ವೆಂಕಟೇಶ ಪ್ರಸಾದ್
ಹಿರಿಯ ಪತ್ರಕರ್ತರು

ಕನ್ನಡದ ಲೇಖಕಿ ಬಾನು ಮುಷ್ತಾಕ್ ಅವರ ಆಯ್ದ ಕತೆಗಳ ಸಂಗ್ರಹಿತ ಸಂಕಲನ 'ಎದೆಯ ಹಣತೆ'ಯ ಇಂಗ್ಲಿಷ್ ಅನುವಾದದ 'ಹಾರ್ಟ್ ಲ್ಯಾಂಪ್' ಕೃತಿಯು ಅಂತಾರಾಷ್ಟ್ರೀಯ ಮನ್ನಣೆಯ ಬುಕರ್ ಪ್ರಶಸ್ತಿಗೆ ಪಾತ್ರವಾಗಿರುವುದು ಇಡೀ ದೇಶಕ್ಕೆ, ವಿಶೇಷವಾಗಿಕನ್ನಡ ನಾಡಿಗೆ ಹೆಚ್ಚಿನ ಸಂಭ್ರಮವನ್ನುತಂದಿದೆ.

ಇದು ಹಾಸನ ಜಿಲ್ಲೆ ಅರಸೀಕೆರೆ ಮೂಲದ ಬಾನು ಅವರ ಬದುಕು ಹಾಗೂ ಬರಹಗಳ ಯಾನವನ್ನು ಅವಲೋಕಿಸುವ ಸಂದರ್ಭವನ್ನು ಸೃಷ್ಟಿಸಿದೆ. ದಖನಿ ಉರ್ದು ಭಾಷಿಕ ಮುಸ್ಲಿಂ ಕುಟುಂಬದ ಬಾನು ಮುಷ್ತಾಕ್ ಅವರು ಹುಟ್ಟಿದ್ದು 1948ರ ಏಪ್ರಿಲ್ 3ರಂದು. ಬಾನು ಅವರ ತಂದೆ ಸರ್ಕಾರದ ಆರೋಗ್ಯ ಇಲಾಖೆ ಉದ್ಯೋಗಿಯಾಗಿದ್ದರು. ಬಾನು ಪ್ರಾಥಮಿಕ ವಿದ್ಯಾಭ್ಯಾಸ ಶುರುವಾಗುವ ವೇಳೆಗೆ ಅವರಿಗೆ ಶಿವಮೊಗ್ಗಕ್ಕೆ ವರ್ಗಾವಣೆಯಾಗಿತ್ತು. ಹೀಗಾಗಿ, ಬಾನು ಅವರ ಆರಂಭಿಕ ವಿದ್ಯಾಭ್ಯಾಸ ಶಿವಮೊಗ್ಗದಲ್ಲಿ ನಡೆಯಿತು. ಆಗ ಶಾಲೆಗೆ ಪ್ರವೇಶ ನೀಡುವ ಸಂದರ್ಭದಲ್ಲಿ ಶಿವಮೊಗ್ಗದ ಮಿಷನರಿ ಶಾಲೆಯ ಮುಖ್ಯಸ್ಥರು ಬಾನು ಅವರ ತಂದೆಗೆ "ನಿಮ್ಮ ಮಗಳು ಆರು ತಿಂಗಳಲ್ಲಿ ಕನ್ನಡ ಕಲಿಯಬೇಕು' ಎಂದು ಷರತ್ತು ಹಾಕಿದ್ದರಂತೆ. ಆಗ 8 ವರ್ಷದ ಬಾಲಕಿಯಾಗಿದ್ದ ಬಾನು ಅಂತೆಯೇ ಆರು ತಿಂಗಳಲ್ಲಿ ಕನ್ನಡ ಭಾಷೆಯನ್ನು ಬಹಳ ಚೆನ್ನಾಗಿ ಕಲಿತು ಶಾಲೆಯಲ್ಲಿ ಮೆಚ್ಚುಗೆ ಗಳಿಸಿದ್ದರು.

ಬಿಎಸ್.ಸಿ., ಎಲ್‌ಎಲ್‌ಬಿ ಪದವೀಧರರಾಗಿದ್ದು, ಕೆಲವು ದಶಕಗಳಿಂದ ಹಾಸನ ನಗರದಲ್ಲಿ ನೆಲಸಿರುವ ಬಾನು ಅವರು ವೃತ್ತಿ ಬದುಕಿನಲ್ಲಿ ಶಿಕ್ಷಕಿಯಾಗಿ, ಪತ್ರಕರ್ತೆಯಾಗಿ ಹಾಗೂ ವಕೀಲರಾಗಿ ಕಾರ್ಯನಿರ್ವಹಿಸಿದ್ದಾರೆ. ಜೊತೆಗೆ, ಎರಡು ಬಾರಿ ಹಾಸನ ಮುನಿಸಿಪಾಲಿಟಿಗೆ ಸದಸ್ಯೆಯಾಗಿದ್ದ ಅವರು ಸಾಮಾಜಿಕ ಕಾರ್ಯಕರ್ತೆಯಾಗಿಯೂ ಗುರುತಿಸಿಕೊಂಡಿದ್ದಾರೆ.

ಚಿಕ್ಕಂದಿನಿಂದಲೂ ಬರವಣಿಗೆ ಬಗ್ಗೆ ಆಸಕ್ತಿ ಹೊಂದಿದ್ದ ಬಾನು ಅವರಕತೆ ಮೊದಲಿಗೆ 'ಪ್ರಜಾಮತ' ನಿಯತಕಾಲಿಕದಲ್ಲಿ ಪ್ರಕಟಗೊಂಡಿತು. ನಂತರ, ವಿಜಯಪುರದಲ್ಲಿ ಮಹಿಳೆಯೊಬ್ಬರ ಮೇಲೆ ಫತ್ವಾ ಹಾಕಿದ ಸಂದರ್ಭದಲ್ಲಿ ಅದರ ವಿರುದ್ಧ ಧ್ವನಿಯೆತ್ತಿ ಬರೆದ ಲೇಖನ 'ಲಂಕೇಶ್ ಪತ್ರಿಕೆ'ಯಲ್ಲಿ ಪ್ರಕಟಗೊಂಡಿತು. ಅದಾದ ಮೇಲೆ ಅವರುಒಂಬತ್ತು ವರ್ಷ ಕಾಲ ಅದೇ ಪತ್ರಿಕೆಯಲ್ಲಿ ಪತ್ರಕರ್ತೆಯಾಗಿದ್ದರು. ಪತ್ರಕರ್ತ ಲಂಕೇಶ್ ಅವರ ಒಡನಾಟದ ಜೊತೆಗೆ ದಲಿತ ಸಂಘರ್ಷ ಸಮಿತಿ, ರೈತ ಸಂಘದ ಹೋರಾಟ, ಬಂಡಾಯ ಚಳವಳಿ ಸೇರಿದಂತೆ ಹಲವು ಸಾರ್ವಜನಿಕ ಹೋರಾಟಗಳಲ್ಲಿ ತೊಡಗಿಸಿಕೊಂಡು ಅನುಭವ ಹೊಂದಿದ್ದಾರೆ.

ಬಾನು ಮುಷ್ತಾಕ್ ಅವರು 'ಹೆಜ್ಜೆ ಮೂಡಿದ ಹಾದಿ', ಬೆಂಕಿ ಮಳೆ', 'ಎದೆಯ ಹಣತೆ', 'ಸಫೀರಾ' ಮತ್ತು 'ಬಡವರ ಮಗಳು ಹೆಣ್ಣಲ್ಲ' ಎಂಬ ಐದು ಕಥಾಸಂಕಲನಗಳು, 'ಕುಬ್ರಾ' ಎಂಬ ಕಾದಂಬರಿ, 'ಇಬ್ಬನಿಯ ಕಾವು' ಎಂಬ ಲೇಖನ ಸಂಕಲನ, 'ಒದ್ದೆಕಣ್ಣಿನ ಬಾಗಿನ' ಎಂಬ ಕವನ ಸಂಕಲನವನ್ನು ರಚಿಸಿದ್ದಾರೆ. 'ತಾರೀಖ್–ಎ–ಫೆರಿಸ್ತಾ' ಎಂಬ ಉರ್ದುಕೃತಿಯನ್ನುಕನ್ನಡಕ್ಕೆ ಭಾಷಾಂತರಿಸಿದ್ದಾರೆ. 'ಒಮ್ಮೆ ಹೆಣ್ಣಾಗು ಪ್ರಭುವೇ' ಎಂಬ ಅವರಕತೆಯು ಬಾನುಲಿ ನಾಟಕವಾಗಿಯೂ





ಬೂಕರ್ ಪ್ರಶಸ್ತಿ ವಿಜೇತರಾದ ಬಾನು ಮುಷ್ತಾಕ್ ಹಾಗೂ ದೀಪಾ ಭಾಸ್ತಿ.

ರೂಪಾಂತರಗೊಂಡಿದ್ದು, ಅಂತಾರಾಷ್ಟ್ರೀಯ ಪ್ರಶಸ್ತಿಗೆ ಪಾತ್ರವಾಗಿದೆ. ಬಾನುರವರ "ಕರಿನಾಗರ ಹಾವುಗಳು" ಕತೆಯನ್ನು ನಿರ್ದೇಶಕಗಿರೀಶ್ ಕಾಸರವಳ್ಳಿ ಅವರು 'ಹಸೀನಾ' ಎಂಬ ಹೆಸರಿನಲ್ಲಿ ಸಿನಿಮಾ ಮಾಡಿದ್ದು, ಅದುಕೂಡ ಹಲವಾರು ರಾಷ್ಟ್ರ ಹಾಗೂ ರಾಜ್ಯ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದೆ.

"ಬದುಕನ್ನು ಸುಧಾರಿಸಿಕೊಳ್ಳಲು ಹೋರಾಟ ನಡೆಸಬೇಕಾಗುತ್ತದೆ, ಘನತೆಯ ಬದುಕನ್ನು ನಮ್ಮದಾಗಿಸಿಕೊಳ್ಳುವುದು ಬಹಳ ಮುಖ್ಯ. ಅದಕ್ಕಾಗಿ ಬರವಣಿಗೆ ನೆರವಾಗಿ ಒದಗಿಬರಬೇಕು" ಎಂಬುದು ಬಾನು ಮುಷ್ತಾಕ್ ಅವರ ನಂಬಿಕೆಯಾಗಿದೆ. ಹೀಗಾಗಿಯೇ ಅವರ ಕೃತಿಗಳಲ್ಲಿ ಲಿಂಗ ಅಸಮಾನತೆ, ಪುರುಷ ಪ್ರಧಾನ ಸಮಾಜದ ಕ್ರೌರ್ಯ, ಧರ್ಮದ ಮುಸುಕು–ಕಟ್ಟುಪಾಡುಗಳ ಹೆಸರಿನಲ್ಲಿ ಮಹಿಳೆಯರ ಮೇಲೆ ನಡೆಯುವ ಶೋಷಣೆ ಇತ್ಯಾದಿಗಳು ವಸ್ತು–ವಿಷಯದ ಎಳೆಗಳಾಗಿರುತ್ತವೆ. ಕುಟುಂಬಗಳ ಅಡುಗೆ ಮನೆ ಹಾಗೂ ಹಜಾರಗಳಲ್ಲಿ ನಡೆಯುವ ಘಟನೆಗಳು, ಸನ್ನಿವೇಶಗಳನ್ನು ಅನಾವರಣಗೊಳಿಸುತ್ತಾ ಸೂಕ್ತ ನಿರೂಪಣೆಗಳ ಮೂಲಕ ಹಲವು ರೀತಿಯ ಅಸಮಾನತೆ, ದೌರ್ಜನ್ಯ, ಶೋಷಣೆಗಳ ಪರಿಣಾಮಗಳನ್ನು ತೆರೆದಿಡುತ್ತವೆ. ಧರ್ಮದ ತಪ್ಪು ವ್ಯಾಖ್ಯಾನದಿಂದ ಉಂಟಾಗುವ ಸಾಮಾಜಿಕ ಕ್ಷೋಭೆ, ಧಾರ್ಮಿಕರೀತಿ ರಿವಾಜುಗಳ ಹೆಸರಿನಲ್ಲಿ ಮಹಿಳೆಯರು ಅನುಭವಿಸುವ ಅಭದ್ರತೆ, ಶಿಕ್ಷಣದ ಅವಕಾಶಗಳ ದಮನ ಇವುಗಳ ಬಗ್ಗೆ ಸಶಕ್ತವಾಗಿ ಧ್ವನಿಸಿ ಕಾಡುತ್ತವೆ. ಜೊತೆಗೆ, ವಿಶಾಲ ನೆಲೆಯ ಪ್ರೀತಿ, ಸಹೋದರತ್ವ ಹಾಗೂ ಸಾಮರಸ್ಯಕ್ಕಾಗಿ ಹಂಬಲಿಸುತ್ತವೆ.

ಸಾಹಿತ್ಯದ ಕೆಲವು ವಿಮರ್ಶಕರ ಪ್ರಕಾರ, ಬಾನು ಮುಷ್ತಾಕ್ ಅವರ ಬದುಕು ಹಾಗೂ ಬರಹವನ್ನು ಪ್ರತ್ಯೇಕವಾಗಿ ಬೇರ್ಪಡಿಸುವುದು ಕಷ್ಟಸಾಧ್ಯ. 'ಬರವಣಿಗೆಎಂಬುದು ಒಂದು ರಾಜಕೀಯ ಕ್ರಿಯೆ. ಸಹಜವಾಗಿಯೇ ಅದು ಪ್ರತಿಕ್ರಿಯೆಗೆ ಕಾರಣವಾಗುತ್ತದೆ. ಅಧಿಕಾರದ ಕೇಂದ್ರಗಳು ಪ್ರತಿರೋಧ ಒಡ್ಡುವುದು ಕೂಡ ನಿರೀಕ್ಷಿತ" ಎನ್ನುವ ಬಾನು ಅವರು ತಮ್ಮ ಬರಹಗಳಿಗಾಗಿ ಸ್ವತಃ ವಿರೋಧವನ್ನು ಎದುರಿಸಿದ್ದುಂಟು. ಹಾಗೆಂದು ಅವರು ಎದೆಗುಂದಲಿಲ್ಲ. "ಬರವಣಿಗೆಯ ಬಂಡಾಯವನ್ನು ನಿಲ್ಲಿಸಲು ಸಾಧ್ಯವಿಲ್ಲ. ಬರೆಯುವುದೇ ಬಂಡಾಯ" ಎಂಬುದರಲ್ಲಿ ದೃಢ ವಿಶ್ವಾಸವಿರಿಸಿ ಲೇಖನಿಯನ್ನೇ ಪ್ರಬಲ ಸಾಮಾಜಿಕ ಅಸ್ತ್ರವಾಗಿ ಬಳಸುವುದನ್ನು ಮುಂದುವರಿಸಿದರು.

ಇನ್ನು, ಈಗ ಪುರಸ್ಕೃತವಾಗಿರುವ 'ಎದೆಯ ಹಣತೆ'ಯು ಬಾನು ಅವರು 1990ರಿಂದ 2023ರವರೆಗಿನ ಅವಧಿಯಲ್ಲಿ ಬರೆದ ಕತೆಗಳಲ್ಲಿ ಹನ್ನೆರಡನ್ನು ಆರಿಸಿಕೊಂಡು ಹೊರತಂದಿರುವ ಸಂಕಲನವಾಗಿದೆ. ಇದನ್ನು ಪತ್ರಕರ್ತೆಯಾಗಿದ್ದ ದೀಪಾ ಭಾಸ್ತಿ ಅವರು 'ಹಾರ್ಟ್ ಲ್ಯಾಂಪ್' ಹೆಸರಿನಲ್ಲಿ ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. ಈ ಮುನ್ನವೂ ಬಾನು ಅವರ ಹಲವು ಕೃತಿಗಳು ಹಿಂದಿ, ತಮಿಳು, ಮಲಯಾಳಂ, ಉರ್ದು, ಇಂಗ್ಲಿಷ್ ಹೀಗೆ ಹಲವು ಭಾಷೆಗಳಿಗೆ ಅನುವಾದಗೊಂಡಿವೆ. ಕರ್ನಾಟಕ ಸಾಹಿತ್ಯಅಕಾಡೆಮಿ ಪ್ರಶಸ್ತಿ, ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ ಸೇರಿದಂತೆ ಹಲವು ಗೌರವಗಳು ಸಂದಿರುವ ಹಿರಿಮೆ ಅವರದ್ದಾಗಿದೆ.

# ಕನ್ನಡ ಸಾರಸ್ವತ ಲೋಕದ ದಿಗ್ಗಜ - ಕವಿ ಎಚ್.ಎಸ್.ವಿ.


ಕನ್ನಡ ಸಾಹಿತ್ಯ ಲೋಕದಲ್ಲಿ ಅರವತ್ತು ವರ್ಷಗಳ ದಣಿವರಿಯದ ಪಯಣ, ಎಲ್ಲಿಯವರೆಗೆ ಕನ್ನಡ ಜೀವಂತವಾಗಿರುತ್ತದೋ, ಅಲ್ಲಿಯವರೆಗೆ ಎಚ್.ಎಸ್. ವೆಂಕಟೇಶಮೂರ್ತಿ ಅವರ ಹೆಸರು ಚಿರಸ್ಥಾಯಿಯಾಗಿರುತ್ತದೆ. ಅಷ್ಟರಮಟ್ಟಿಗೆ ಕನ್ನಡ ಸಾರಸ್ವತ ಲೋಕದಲ್ಲಿ ಅಳಿಸಲಾಗದ ಹೆಜ್ಜೆಗುರುತು ಮೂಡಿಸಿದ್ದಾರೆ.

'ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ' . 'ಅಮ್ಮ ನಾನು ದೇವರಾಣೆ ಬೆಣ್ಣೆಕದ್ದಿಲ್ಲಮ್ಮ.' 'ಹುಚ್ಚುಕೋಡಿ ಮನಸ್ಸು ಅದು ಹದಿನಾರ ವಯಸ್ಸು' 'ರೆಕ್ಕೆ ಇದ್ದರೆ ಸಾಕೇ ಹಕ್ಕಿಗೆ ಬೇಕು ಬಾನು ಬಯಲಲ್ಲಿ ತೇಲುತ ತಾನು ಮ್ಯಾಲೆ ಹಾರೋಕೆ' ಇಂತಹ ನೂರಾರು ಭಾವಗೀತೆ ಹಾಗೂ ಕವಿತೆಗಳ ಮೂಲಕ ಕನ್ನಡಿಗರ ಭಾವಪ್ರಪಂಚದಲ್ಲಿ ಅವರು ಅಜರಾಮರವಾಗಿದ್ದಾರೆ. ಕಾವ್ಯ, ಮಹಾಕಾವ್ಯ, ಕಥೆ, ಕಾದಂಬರಿ, ನಾಟಕ, ಮಕ್ಕಳ ಸಾಹಿತ್ಯ, ಅನುವಾದ, ವಿಮರ್ಶೆ, ರಂಗಭೂಮಿ, ಕಿರುತೆರೆ, ಸಿನಿಮಾ – ಹೀಗೆ ಹಲವು ಪ್ರಕಾರಗಳಲ್ಲಿ ಸಾಹಿತ್ಯದ ಕೃಷಿಮಾಡಿ ಎಲ್ಲ ವಯೋಮಾನದವರ ಅಭಿಮಾನಕ್ಕೆ ಪಾತ್ರರಾಗಿದ್ದರು.

1944 ಜೂನ್ 23ರಂದು ಅಂದಿನ ಶಿವಮೊಗ ಜಿಲ್ಲೆಯ (ಇಂದು ದಾವಣಗೆರೆ ಜಿಲ್ಲೆಯ) 'ಹೊದಿಗೆರೆ' ಗ್ರಾಮದಲ್ಲಿ ಜನಿಸಿದರು. ತಂದೆ ನಾರಾಯಣ ಭಟ್ಟರು ಮತ್ತು ತಾಯಿ ಶಿಕ್ಷಕಿ ನಾಗರತ್ನಮ್ಮ. ಹೊದಿಗೆರೆ ಐತಿಹಾಸಿಕವಾಗಿ ಪ್ರಸಿದ್ಧವಾದ ಸ್ಥಳ. ಮರಾಠರ ಕಣ್ಮಣಿ ಶಿವಾಜಿ ಮಹಾರಾಜರ ತಂದೆ ಷಹಜಿಯ ಸಮಾಧಿ ಅಲ್ಲಿದೆ.

ಕನ್ನಡ ಅಧ್ಯಾಪಕರಾಗಿದ್ದ ನರಸಿಂಹಶಾಸ್ತ್ರಿಗಳು ವೆಂಕಟೇಶಮೂರ್ತಿಯವರ ಸೃಜನಶೀಲಶಕ್ತಿಗೆ ಮೂರ್ತರೂಪ ನೀಡಿ, ಅವರನ್ನು ತಿದ್ದಿ ತೀಡಿ ಬೆಳಸಿದವರು.  ಕನ್ನಡ ಸಾರಸ್ವತ ಮಹಾನ್ ದಿಗ್ಗಜರಾದ ಕುವೆಂಪು, ಬೇಂದ್ರೆ, ಪುತಿನ, ಗೊರೂರು, ಮಾಸ್ತಿ, ಕಾರಂತ ಮೊದಲಾದವರ ಕೃತಿಗಳನ್ನು ಮೂರ್ತಿಯವರಿಗೆ ಪರಿಚಯಿಸಿ, ಹೊಸಸಾಹಿತ್ಯ ಪ್ರಪಂಚಕ್ಕೆ ಪ್ರವೇಶ ಪಡೆಯಲು ಕಾರಣರಾದರು, ನರಸಿಂಹಶಾಸ್ತ್ರಿಗಳು.

ನಿತ್ಯೋತ್ಸವ ಕವಿ ನಿಸಾರ್ ಅಹಮದ್ ಹಾಗೂ ಬಿಆರ್. ಲಕ್ಷ್ಮಣರಾವ್ ಅವರ ಮಿತ್ರರಾಗಿ ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪನವರ ಅಚ್ಚುಮೆಚ್ಚಿನ ಶಿಷ್ಯರಾಗಿ ಸಾಹಿತ್ಯಲೋಕದಲ್ಲಿ ತಮ್ಮನ್ನು ಗುರುತಿಸಿಕೊಂಡವರು. ಅವರು



ಒಳ್ಳೆಯ ಉಪನ್ಯಾಸಕ ಮಾತ್ರವಲ್ಲ, ಒಳ್ಳೆಯ ಸಂಘಟಕರಾಗಿದ್ದರು.

ಶ್ರೀಕೃಷ್ಣನ ಅಮರಪ್ರೇಮ ಪರಿಚಯಿಸಿದ ಅಪರೂಪದ ಕವಿ; ಕನ್ನಡ ಸಾಹಿತ್ಯದಲ್ಲಿ ಪುತಿನ ಅವರನ್ನು ಹೊರತುಪಡಿಸಿದರೆ ಶ್ರೀಕೃಷ್ಣನ ಪ್ರೇಮದ ಎಲ್ಲೆಯನ್ನು ವಿವಿಧ ರೀತಿಯಲ್ಲಿ ಪರಿಚಯಿಸಿದವರು ಕವಿ ವೆಂಕಟೇಶಮೂರ್ತಿ ಮಾತ್ರ. ಅವರ ಕೃಷ್ಣ ನಮ್ಮ ಕುಮಾರವ್ಯಾಸನ ಕೃಷ್ಣನಲ್ಲ.

1973ರಲ್ಲಿ ಬೆಂಗಳೂರಿನ ಸೇಂಟ್ ಜೋಸೆಫ್ ವಾಣಿಜ್ಯ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕ ವೃತ್ತಿ ಆರಂಭಿಸಿದ ಅವರು 2000ದಲ್ಲಿ ನಿವೃತ್ತಿ ಹೊಂದಿದ್ದರು. ಸುಮಾರು 27 ವರ್ಷಗಳ ಕಾಲ ಒಂದೇ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದವರು. ಸ್ನೇಹಜೀವಿಯಾದ ಅವರು ಬಂಧು, ಬಳಗದೊಡನೆ ಬದುಕಿದ ಕವಿ.


ಅನೇಕ ಕನ್ನಡದ ಚಲನಚಿತ್ರಗಳಿಗೆ ಹಾಡುಗಳು, ಕಥೆ ಮತ್ತು ಸಂಭಾಷಣೆ ಬರೆದಿದ್ದಾರೆ. ಕಲಬುರಗಿಯಲ್ಲಿ ನಡೆದ 85ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಕೇಂದ್ರ ಸಾಹಿತ್ಯ ಅಕಾಡೆಮಿ, ರಾಜ್ಯೋತ್ಸವ, ಆಕಾಶವಾಣಿ ರಾಷ್ಟ್ರೀಯ ಪ್ರಶಸ್ತಿಗಳು ಅವರ ಶೋಭೆಯನ್ನು ಹೆಚ್ಚಿಸಿವೆ.

ವ್ಯಕ್ತಿಗತವಾಗಿ ಗ್ರಾಮೀಣ ಪ್ರತಿಭೆ ವೆಂಕಟೇಶಮೂರ್ತಿ ಸಂಕೋಚ ಸ್ವಭಾವದವರಾಗಿದ್ದರೂ ಸಾಹಿತ್ಯ, ಸಿನಿಮಾ ರಂಗಭೂಮಿಯ ಎಲ್ಲ ಪ್ರಕಾರಗಳಲ್ಲೂ ಸಾಹಿತ್ಯ ಸೇವೆ ಮಾಡಿ ಸೈ ಎನಿಸಿಕೊಂಡು ಮಿಂಚಿದ್ದಕ್ಕೆ ಕಾರಣ ಅವರ ಅಗಾಧ ಪ್ರತಿಭೆ. ಇದು ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ ಎಂದರೆ ಅತಿಶಯೋಕ್ತಿಯೇನಲ್ಲ.!!

▪ **ನಿರೂಪಣೆ: ಕೆ.ಎಸ್. ರಾಜಮನ್ನಾರ್**

## ನೆನಪಿನಲ್ಲಿಡಬೇಕಾದ ಮಾತು



“ಯಾರು ಭಗವಂತನ ಕಡೆಗೆ ಹೋಗಬೇಕು ಎಂದು ಹೊರಟಿದ್ದಾರೋ ಅವರಿಗೆ ಬರುವಂತಹ ಕಷ್ಟ ತೊಂದರೆಗಳು ಜಗತ್ತಿನಲ್ಲಿ ಇನ್ನಾರಿಗೂ ಬರುವುದಿಲ್ಲ. ಯಾಕೆಂದರೆ ಅವನ ಭಕ್ತಿಗೆ ಭಗವಂತ ಮೆಚ್ಚಿರುತ್ತಾನೆ. ನನ್ನಲ್ಲಿ ಇವನಿಗೆ ಪರಿಪೂರ್ಣವಾದ ಶ್ರದ್ಧೆ ಮೂಡಲಿ ಎನ್ನುವ ದೃಷ್ಟಿಯಿಂದ ಅನೇಕ ತರವಾದ ಅಡ್ಡಿ,ಆತಂಕಗಳನ್ನು ತಂದೊಡ್ಡುತ್ತಿರುತ್ತಾನೆ. ಅವನ ಹೆಂಡತಿಯಿಂದಲೋ, ಸ್ನೇಹಿತರಿಗಿಂತಲೂ, ಮಕ್ಕಳಿಂದಲೋ ಯಾರದೋ ಒಂದು ರೂಪದಲ್ಲಿ ಭಗವಂತ ಅವನನ್ನು ಕಾಡುತ್ತಿರುತ್ತಾನೆ. ಇದು ಸತ್ಯವಾದ ಮಾತು.

- ಪರಮಹಂಸ ಸದ್ಗುರು ಶ್ರೀಸತ್ ಉಪಾಸಿ
(ಪರಮಾವೃತಸಾರ ಪು.307)

# ಬೆಂಗಳೂರಿನಲ್ಲಿ ಆರ್‌ಸಿಬಿ ವಿಜಯೋತ್ಸವ
# ಬಲಿಯಾದ ಕನ್ನಡದ ಯುವಜನತೆ

### ಬ್ರಿಟಿಷ್ ಆಳ್ವಿಕೆಯ ಪಳೆಯುಳಿಕೆ

ಇಂಗ್ಲೆಂಡ್‌ನ ಖ್ಯಾತ ನಾಟಕಕಾರ ಜಾನ್ ಬರ್ನಾಡ್ ಷಾ ಅವರು ಒಂದೆಡೆ ಕ್ರಿಕೆಟ್ ಕುರಿತು ಹೀಗೆ ಹೇಳಿದ್ದಾರೆ: “ಹನ್ನೊಂದು ಜನ ಮೂರ್ಖರು ಆಡುತ್ತಾರೆ, ಹನ್ನೊಂದು ಸಾವಿರ ಜನ ನೋಡುತ್ತಾರೆ”. ಈಗ ಕ್ರಿಕೆಟ್ ನೋಡುವವರ ಸಂಖ್ಯೆ ಸಾವಿರ ದಾಟಿ ಕೋಟಿಗೆ ಹೋಗಿ ಮುಟ್ಟಿದೆ. ಬ್ರಿಟಿಷ್ ಆಳ್ವಿಕೆಯ ಪಳೆಯುಳಿಕೆ ಈ ಕ್ರಿಕೆಟ್ ಕ್ರೀಡೆ. ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿ ಬ್ರಿಟಿಷ್ ಆಡಳಿತದ ದಾಸ್ಯದ ಹೆಗ್ಗುರುತಾಗಿ ತನ್ನ ಪ್ರಭಾವವನ್ನು ಭಾರತೀಯ ಸಮಾಜದ ಮೇಲೆ ಅಚ್ಚಳಿಯದೇ ಉಳಿಸಿಕೊಂಡಿದೆ. ಸ್ವದೇಶಿ ಮಂತ್ರವನ್ನು ಜಪಿಸುವ ಬಿಜೆಪಿ ಆಡಳಿತಕ್ಕೆ ಬಂದರೂ ಕ್ರಿಕೆಟ್ ಹುಚ್ಚು ಕಡಿಮೆಯಾಗಿಲ್ಲ. ಈಗ ಈ ಆಟ ಕ್ರೀಡೆಯ ಸ್ಥಾನದಿಂದ ಜೂಜಿನ ಸ್ಥಾನಕ್ಕೆ ಜಿಗಿದು ರಾಷ್ಟ್ರದ ಯುವಜನತೆಯಲ್ಲಿ ಅದೊಂದು ವ್ಯಸನವಾಗಿ ಪರಿಣಮಿಸಿದೆ. ಅದರ ಫಲವೇ ಬೆಂಗಳೂರಿನಲ್ಲಿ ಆರ್‌ಸಿಬಿ ವಿಜಯೋತ್ಸವದ ಸಂದರ್ಭದಲ್ಲಿ ದುರ್ಘಟನೆ.

ಜೂನ್ 4 ಬೆಂಗಳೂರು ಕರ್ನಾಟಕದ ಇತಿಹಾಸದಲ್ಲಿ ಮರೆಯಲಾಗದ ಕರಾಳದಿನ. ಐಪಿಎಲ್ ಪಂದ್ಯಾವಳಿಯಲ್ಲಿ ಆರ್.ಸಿ.ಬಿ ತಂಡದ ಗೆಲುವನ್ನು ಎಷ್ಟು ಸಡಗರ ಸಂಭ್ರಮದಿಂದ ಕಣ್ಣು ತುಂಬಿಕೊಳ್ಳಬಹುದಾಗಿತ್ತೋ ಅದಕ್ಕಿಂತ ಹೆಚ್ಚಾಗಿ ಸಾವಿನ ಮನೆಯ ಸೂತಕದ ಗೋಳಾಟ ತುಂಬಿಕೊಂಡಿದೆ. ಜೀವ ಕಳೆದುಕೊಂಡ ಕುಟುಂಬಗಳ ಚೀರಾಟ ಮತ್ತು ಮುಗಿಲು ಮುಟ್ಟಿದ ಆಕ್ರಂದನಕ್ಕೆ ಜಗತ್ತು ಮಮ್ಮಲ ಮರುಗುವಂತಾಯಿತು.



ಟ್ರೋಫಿಯನ್ನು ಪ್ರಥಮಬಾರಿಗೆ ಗೆದ್ದು ಬಂದ ಆಟಗಾರರನ್ನು ಎದುರುಗೊಳ್ಳಲು ಸಂಭ್ರಮದಿಂದ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ದಾಂಗುಡಿಯಿಟ್ಟ ಲಕ್ಷಾಂತರ ಕ್ರಿಕೆಟ್ ಪ್ರೇಮಿಗಳ ಸಡಗರ ಸಂಭ್ರಮ ಕೆಲವೇ ಕ್ಷಣಗಳಲ್ಲಿ ಸ್ಮಶಾನ ಮೌನ ಮಡುಗಟ್ಟುವಂತಾಯಿತು. ಕಾಲ್ತುಳಿತಕ್ಕೆ 11 ಜೀವಗಳು ನೋಡುನೋಡುತ್ತಿದ್ದಂತೆಯೇ ಬೀದಿಯಲ್ಲಿ ಶವವಾಗಿದ್ದು ನಿಜಕ್ಕೂ ಮನಕಲುಕುವ ದುರಂತ.

### ಕ್ರಿಕೆಟ್ ಪ್ರೇಮಿಗಳ ಪ್ರವಾಹ:

ಅಲ್ಲಿದ್ದ ಜನರ ಉತ್ಸಾಹ ನೋಡಿದಾಗ ದೇವರಿಗೆ ಕೈ ಎತ್ತಿ ಮುಗಿಯಲೇಬೇಕು. ಕಾರಣ ಸಾವಿನ ಲೆಕ್ಕವನ್ನು ಕೇವಲ ಹನ್ನೊಂದಕ್ಕೆ ಸೀಮಿತಗೊಳಿಸಿದ್ದಾನೆ. ಅವನಿಗೆ ಕೋಟಿಕೋಟಿ ಪ್ರಣಾಮಗಳು.

### ಅತಿರೇಕದ ವರ್ತನೆ:

ಆ ಪರಿಸ್ಥಿತಿಯನ್ನು ಗಮನಿಸಿದರೆ ಮಿತಿ ಮೀರಿ ಹೋಗಿದ್ದರೆ ಸಾವಿರ ಸಾವಿರ ಹೆಣಗಳ



ಮೆರವಣಿಗೆ ಬೆಂಗಳೂರಿನ ಬೀದಿಯಲ್ಲಿ ಸಾಗಬೇಕಿತ್ತು. ಈ ಕಾರಣಕ್ಕಾಗಿ ಭಗವಂತ ಕರುಣಾಮಯಿ, ಬೆಂಗಳೂರಿಗೆ ಕರುಣೆಯನ್ನು ತೋರಿದ್ದಾನೆ ಎಂದರೂ ತಪ್ಪಾಗಲಾರದು. ಈ ಮಾತು ನಿಮಗೆ ಆಶ್ಚರ್ಯವೆನಿಸಬಹುದು. ಆ ದಿನ ಹರಿದು ಬಂದಿದ್ದ ಜನಸಾಗರವನ್ನು ನೋಡಿದಾಗ, ಗಮನಿಸಿದಾಗ ಎಲ್ಲರ ಬಾಯಲ್ಲೂ ದೇವರು ದೊಡ್ಡವನು ಎಂಬ ಮಾತೇ ಹೆಚ್ಚಾಗಿ ಕೇಳಿಬರುತ್ತಿತ್ತು. ಜೀವನದಲ್ಲಿ ಸಂಭ್ರಮಗಳೇ ಅಪರೂಪವಾಗಿರುವ ಹೊತ್ತಿನಲ್ಲಿ ಕರುನಾಡಿನ ಲಕ್ಷಾಂತರ ಜನ ಗೆಲುವು ಸಂಭ್ರಮಿಸುತ್ತ ಜೀವನಕ್ಕೆ ಅರ್ಥ ಮತ್ತು ಸಂತೋಷ ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದರು. ಇದು ಹುಚ್ಚೋ, ಉನ್ಮಾದವೋ, ವ್ಯವಸ್ಥೆಯ ವೈಫಲ್ಯವೋ! ಒಟ್ಟಾರೆ ಹತ್ತಾರು ಮನೆಗಳ ನಂದಾದೀಪಗಳೇ ಆರಿ ಹೋದವು.

### ದುರ್ಘಟನೆಗೆ ಹೊಣೆಗಾರರು ಯಾರು?

ಈ ದುರಂತಕ್ಕೆ ಕಾರಣ ರಾಜ್ಯ ಸರ್ಕಾರವೇ, ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯೇ ಅಥವಾ ಆರ್‌ಸಿಬಿ ತಂಡವೇ ಅಥವಾ ಅಭಿಮಾನಿಗಳ ಹುಚ್ಚು ಅತಿರೇಕದ ವರ್ತನೆಯೇ ಇಲ್ಲವೇ ಗೆಲುವಿನ ಉನ್ಮಾದ, ಉತ್ಸಾಹ. ಸಭ್ಯತೆಯನ್ನು ಮೀರಿ ಅತಿರೇಕಕ್ಕೆ ತಲುಪುವಂತೆ ಇಂಧನ ತುಂಬಿದ ಸುದ್ದಿ ವಾಹಿನಿಗಳೇ?

ವಿಧಾನಸೌಧ ಮೆಟ್ಟಿಲುಗಳ ಮೇಲೆ ಸರ್ಕಾರ ಕಾರ್ಯಕ್ರಮ ಆಯೋಜಿಸಿದ್ದು, ಆಹ್ವಾನ ನೀಡಿದ್ದು ನಿಜ. ಅಲ್ಲಿ ಯಾವುದೇ ಅಹಿತಕರ ಘಟನೆ, ಜೀವಹಾನಿ ನಡೆಯಲಿಲ್ಲ. ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದ ದುರಂತಕ್ಕೂ ಸರ್ಕಾರಕ್ಕೂ ಸಂಬಂಧವಿಲ್ಲ ಎನ್ನುವುದು ಸರ್ಕಾರದ ಸಮರ್ಥನೆ. ಬೆಂಗಳೂರು ಪೊಲೀಸ್ ಕಮಿಷನರ್ ಸೇರಿದಂತೆ ಐವರು ಪೊಲೀಸ್ ಅಧಿಕಾರಿಗಳ ಅಮಾನತು ಆಗಿದೆ. ವಿಷಯ ದಿನಕಳೆದಂತೆ ರಾಜಕೀಯ ಪಕ್ಷಗಳ ಕೆಸರು ಎರಚಾಟ ಅತಿರೇಕದ ಪ್ರದರ್ಶನವಾಗಿ ವ್ಯವಸ್ಥೆಯ ಸುಧಾರಣೆಗಿಂತ ರಾಜಕೀಯ ಲಾಭ ನಷ್ಟವೇ ಮುಖ್ಯವಾಗುತ್ತಿರುವುದು ಮತ್ತೊಂದು ದುರಂತ.

ಹಾಗೆ ನೋಡಿದರೆ ಜಗತ್ತಿನ ಕ್ರೀಡಾ ಇತಿಹಾಸದಲ್ಲಿ ಇಂತಹ ಘಟನೆ ಇದೇ ಮೊದಲಲ್ಲ, ಕೊನೆಯ ಘಟನೆಯೂ ಅಗುವುದಿಲ್ಲ. ಆದರೆ, ಎಳೆಯ ಜೀವಗಳನ್ನು ಕಳೆದುಕೊಂಡಿದ್ದಕ್ಕೆ ಬೆಂಗಳೂರು, ಚಿನ್ನಸ್ವಾಮಿ ಕ್ರೀಡಾಂಗಣ ಸಾಕ್ಷಿಯಾಯಿತಲ್ಲ, ಕಪ್ ನಮ್ಮದೇ ಎಂದು ಸಂಭ್ರಮಿಸುವ ಕಾಲಘಟ್ಟದಲ್ಲಿ ತಪ್ಪು ನಮ್ಮದೇ ಎಂದು ಗೋಳಾಡುವ ಪರಿಸ್ಥಿತಿ ಸೃಷ್ಟಿಯಾಗಿದೆ. ಇದು ವಿಧಿಯಾಟವೋ ಅಥವಾ ಸ್ವಯಂಕೃತ ಅಪರಾಧವೋ, ಗೊತ್ತಿಲ್ಲ!

### ಕ್ರೀಡಾ ದುರಂತಗಳ ವಾರೆನೋಟ:

ಜಗತ್ತಿನ ವಿವಿಧ ದೇಶಗಳ ಕ್ರೀಡಾಂಗಣಗಳಲ್ಲಿ ಕಳೆದ 60 ವರ್ಷಗಳಲ್ಲಿ ಸಂಭವಿಸಿದ ಕಾಲ್ತುಳಿತ ಮತ್ತಿತರ ದುರಂತಗಳ ಮಾಹಿತಿ ಇಲ್ಲಿದೆ:

- 1964ರಲ್ಲಿ ಪೆರು ದೇಶದ ಮಲಾಂಗ್ ಕ್ರೀಡಾಂಗಣದಲ್ಲಿ ಫುಟ್‌ಬಾಲ್ ಕ್ರೀಡೆಯ ಸಂದರ್ಭದಲ್ಲಿ ಸಂಭವಿಸಿದ ಭೀಕರ ಕಾಲ್ತುಳಿತದಲ್ಲಿ 320 ಜನರು ಸ್ಥಳದಲ್ಲೇ ಸಾವನ್ನಪ್ಪಿದ್ದರು.
- 1969ರಲ್ಲಿ ಕೋಲ್ಕತ್ತಾ–ಆಸ್ಟ್ರೇಲಿಯಾ ಮತ್ತು ಭಾರತ ನಡುವಿನ ನಾಲ್ಕನೇ ಕ್ರಿಕೆಟ್ ಟೆಸ್ಟ್ ಪಂದ್ಯ ನಡೆದ ಕೊಲ್ಕತ್ತದ ಈಡನ್ ಗಾರ್ಡನ್ಸ್ ಮೈದಾನದ ಕಾಲ್ತುಳಿತದಲ್ಲಿ ಆರು ಜನರು ಸಾವನ್ನಪ್ಪಿದ್ದರು.
- 1971ರಲ್ಲಿ ಸ್ಕಾಟ್ಲೆಂಡ್ ಇಬ್ರೊಕ್ಸ್ ಕ್ರೀಡಾಂಗಣದಲ್ಲಿ ರೇಂಜರ್ಸ್ ಮತ್ತು ಸೆಲ್ಟಿಕ್ ಡರ್ಬಿ ತಂಡಗಳ ನಡುವೆ ನಡೆಯುತ್ತಿದ್ದ ಫುಟ್ಬಾಲ್ ಪಂದ್ಯದ ವೇಳೆ ಉಂಟಾದ ಘರ್ಷಣೆಯಲ್ಲಿ 66 ಜನರು ಸಾವನ್ನಪ್ಪಿದ್ದರು.
- 1974ರಲ್ಲಿ ಈಜಿಪ್ಟ್ ಮಾಲೆಕ್ ಕ್ರೀಡಾಂಗಣದಲ್ಲಿ ಫುಟ್ಬಾಲ್ ಕ್ರೀಡೆಯ ಸಂದರ್ಭದಲ್ಲಿ ಕಾಲ್ತುಳಿತ ಸಂಭವಿಸಿತ್ತು. ಘಟನೆಯಲ್ಲಿ 48 ಜನರು ಜೀವ ಕಳೆದುಕೊಂಡಿದ್ದರು.
- 1980ರಲ್ಲಿ ಕೋಲ್ಕತ್ತಾದಲ್ಲಿ ನಡೆದ ಮೋಹನ್ ಬಗಾನ್ ಮತ್ತು ಪೂರ್ವ ಬಂಗಾಳ ಕೊಲ್ಕತ್ತಾ ಫುಟ್ಬಾಲ್ ಲೀಗ್ ಪಂದ್ಯದ ವೇಳೆ ಸಂಭವಿಸಿದ ಕಾಲ್ತುಳಿತ ಮತ್ತು ಗಲಭೆಯಲ್ಲಿ 16 ಜನರು ಸಾವನ್ನಪ್ಪಿದ್ದರು.
- 1982ರಲ್ಲಿ ರಷ್ಯಾದ ಲುಜ್ನಿಕಿ ಕ್ರೀಡಾಂಗಣದಲ್ಲಿ ಸ್ಪಾರ್ಟಕ್ ಮಾಸ್ಕೋ ಮತ್ತು ಡಚ್ ತಂಡ ಹಾರ್ಲೆಮ್ ನಡುವಿನ ಯುಇಎಫ್‌ಎ ಪುಟ್‌ಬಾಲ್ ಕಪ್ ಪಂದ್ಯದ ಕೊನೆಯಲ್ಲಿ ಕಾಲ್ತುಳಿತ ಸಂಭವಿಸಿ 66 ಜನ ಮೃತಪಟ್ಟಿದ್ದರು.
- 1985ರಲ್ಲಿ ಬೆಲ್ಜಿಯಂನ ಬ್ರಸೆಲ್ಸ್ ಹೈಸೆಲ್ ಕ್ರೀಡಾಂಗಣದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ 39 ಜನರು ಮೃತಪಟ್ಟಿದ್ದರು.
- 1985ರಲ್ಲಿ ಇಂಗ್ಲೆಂಡ್‌ನಲ್ಲಿ ಬ್ರಾಡ್ಫೋರ್ಡ್ ಮತ್ತು ಲಿಂಕನ್‌ಸಿಟಿ ನಡುವಿನ ಕ್ರಿಕೆಟ್ ಪಂದ್ಯದ ವೇಳೆ 56 ಜನರು ಮೃತಪಟ್ಟಿದ್ದರು.
- 1988ರಲ್ಲಿ ನೇಪಾಳದ ದಶರಥ್ ಕ್ರೀಡಾಂಗಣದಲ್ಲಿ ಕಾಲ್ತುಳಿತದಲ್ಲಿ 93 ಮಂದಿ ಸಾವನ್ನಪ್ಪಿದ್ದರು.
- 1989ರಲ್ಲಿ ಇಂಗ್ಲೆಂಡಿನ ಹಿಲ್ಸ್‌ಬರೋ ಕ್ರೀಡಾಂಗಣದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ 97 ಅಭಿಮಾನಿಗಳು ಮೃತಪಟ್ಟಿದ್ದರು.
- 1991ರಲ್ಲಿ ದಕ್ಷಿಣ ಆಫ್ರಿಕಾದ ಒರ್ಲ್ಯಾಂಡೊ ಪೈರೇಟ್ಸ್ ಮತ್ತು ಕೈಜರ್ ಚೀಫ್ಸ್ ನಡುವಿನ ಫುಟ್ಬಾಲ್ ಪಂದ್ಯದಲ್ಲಿ 40 ಪ್ರೇಕ್ಷಕರು ಸಾವನ್ನಪ್ಪಿದ್ದರು.
- 1996ರಲ್ಲಿ ಗ್ವಾಟೆಮಾಲಾದ ಫುಟ್ಬಾಲ್ ವಿಶ್ವಕಪ್ ಅರ್ಹತಾ ಪಂದ್ಯದಲ್ಲಿ ಮಾಟಿಯೊ ಫ್ಲೋರ್ಸ್ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ಸಂಭವಿಸಿದ ದುರಂತದಲ್ಲಿ 80ಕ್ಕೂ ಪ್ರೇಕ್ಷಕರು ಜೀವಕಳೆದು ಕೊಂಡಿದ್ದರು.
- 2001ರಲ್ಲಿ ಘಾನಾದ ಅಕ್ರಾದಲ್ಲಿ ಹಾರ್ಟ್ಸ್ ಆಫ್ ಓಕ್ಸ್ ಮತ್ತು ಕುಮಾಸಿ ನಡುವಿನ ಫುಟ್ಬಾಲ್ ಪಂದ್ಯದ ಕೊನೆಯಲ್ಲಿ ಸಂಭವಿಸಿದ ದುರಂತದಲ್ಲಿ 126 ಜನರು ಸಾವನ್ನಪ್ಪಿದ್ದರು.
- 2001ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆದ ಒರ್ಲ್ಯಾಂಡೊ ಪೈರೇಟ್ಸ್ ಮತ್ತು ಕೈಜರ್ ಚೀಫ್ಸ್ ನಡುವಿನ ಪಂದ್ಯದ ವೇಳೆ ಸಂಭವಿಸಿದ ದುರಂತಲ್ಲಿ 43 ಜನರು ಸಾವನ್ನಪ್ಪಿದ್ದರು.
- 2009ರಲ್ಲಿ ಐವರಿ ಕೋಸ್ಟ್‌ನಲ್ಲಿ ನಡೆದ ಐವರಿ ಕೋಸ್ಟ್ ಮತ್ತು ಮಲಾವಿ ನಡುವಿನ ವಿಶ್ವಕಪ್ ಅರ್ಹತಾ ಪಂದ್ಯದ ಸಮಯದಲ್ಲಿ, ಅಬಿಡ್ಜಾನ್ನ ಫೆಲಿಕ್ಸ್ ಹೌಫೌಟ್–ಬೋಯಿಗ್ನಿ ಕ್ರೀಡಾಂಗಣದಲ್ಲಿ ಕಾಲ್ತುಳಿತ ಕನಿಷ್ಠ 19 ಜನರು ಪ್ರಾಣ ಕಳೆದುಕೊಂಡಿದ್ದರು.
- 2012ರಲ್ಲಿ ಈಜಿಪ್ಟಿನ ಪೋರ್ಟ್ ಸೈಡ್ ಕ್ರೀಡಾಂಗಣದಲ್ಲಿ ಸಂಭವಿಸಿದ ಕಾಲ್ತುಳಿತ ಪ್ರಕರಣಲ್ಲಿ 74 ಜನರು ಸಾವನ್ನಪ್ಪಿದ್ದರು.
- 2022ರಲ್ಲಿ ಇಂಡೋನೇಷ್ಯಾದ ಪೂರ್ವ ಜಾವಾ ನಗರದ ಮಲಾಂಗ್‌ನಲ್ಲಿರುವ ಕಂಜುರುಹಾನ್ ಕ್ರೀಡಾಂಗಣದಲ್ಲಿ ಸಂಭವಿಸಿದ ಭದ್ರತಾ ಪಡೆ ಹಾಗೂ ಅಭಿಮಾನಿಗಳ ನಡುವಿನ ಘರ್ಷಣೆಯಲ್ಲಿ 135 ಜನರು ಸಾವನ್ನಪ್ಪಿದ್ದರು.
- 2025ರ ಜೂನ್ 4ರಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ನೂಕುನುಗ್ಗಲು, ಕಾಲ್ತುಳಿತ ದುರಂತದಲ್ಲಿ 11 ಮಂದಿ ಮೃತಪಟ್ಟಿದ್ದಾರೆ.

ಈಚೆಗೆ ಕ್ರಿಕೆಟ್ ಹಾಗೂ ಇನ್ನು ಯಾವುದೇ ಕ್ರೀಡೆಗೆ ಸಂಬಂಧಿಸಿದ ಬೃಹತ್ ಕ್ರೀಡಾ ಕಾರ್ಯಕ್ರಮ ನಡೆಯವ ವೇಳೆ ಕಾಲ್ತುಳಿತ ಘಟನೆಗಳು ನಡೆಯದಂತೆ ತಡೆಯಲು ಜಗತ್ತಿನ ಹಲವು ದೇಶಗಳು ಮುಂಜಾಗರೂಕತಾ ಕ್ರಮಗಳನ್ನು ಕೈಗೊಂಡಿವೆ. ವಿಜಯೋತ್ಸವ ಅಥವಾ ಮೆರವಣಿಗೆಯನ್ನು ತರಾತುರಿಯಲ್ಲಿ ಆಯೋಜಿಸುವಂತಿಲ್ಲ. ಯಾವುದೇ ಕ್ರೀಡೆಯನ್ನು ಆಯೋಜನೆ ಮಾಡುವಾಗ ಭದ್ರತೆಗೆ ವಿಶೇಷ ಅದ್ಯತೆ. ಜನಸಂದಣಿ ನಿಯಂತ್ರಣ ತಂತ್ರಗಳ ಅನುಷ್ಠಾನ. ಅಪಾಯದ ಸಂಪೂರ್ಣ ಮೌಲ್ಯಮಾಪನ ನಡೆಸಿ, ಅದರ ನಿರ್ವಹಣೆಗಾಗಿ ಯೋಜನೆಯನ್ನು ರೂಪಿಸಬೇಕು. ಸಾಮಾಜಿಕ ಮಾಧ್ಯಮಗಳನ್ನು ಬಳಸಿಕೊಂಡು ಅಭಿಮಾನಿಗಳೊಂದಿಗೆ ಸ್ಪಷ್ಟ ಹಾಗೂ ಸಮಯೋಚಿತ ಸೂಚನೆಗಳನ್ನು ಕೊಡುವುದು ಅತ್ಯಾವಶ್ಯಕ. ನಗರ ಪ್ರದೇಶದಿಂದ ಕ್ರೀಡಾಂಗಣಗಳ ಸ್ಥಳಾಂತರ ಮತ್ತು ಅಸ್ತಿತ್ವದಲ್ಲಿರುವ ಕ್ರೀಡಾಸ್ಥಳಗಳ ನವೀಕರಣ ತುಂಬಾ ಮುಖ್ಯ. ನಿರ್ಲಕ್ಷ್ಯ ಅಥವಾ ಸುರಕ್ಷತಾ ಪ್ರೋಟೋಕಾಲ್‌ಗಳನ್ನು ಅನುಸರಿಸಲು ವಿಫಲವಾದ ವ್ಯಕ್ತಿಯ ಅಥವಾ ಸಂಸ್ಥೆಗಳ ವಿರುದ್ಧ ಕಠಿಣ ಕಾನೂನು ಕ್ರಮ. ಸುರಕ್ಷತಾ ಮಾರ್ಗಸೂಚಿಗಳ ಬಗೆಗೆ ಪ್ರೇಕ್ಷಕರಿಗೆ, ಅಭಿಮಾನಿಗಳಿಗೆ ಮೊದಲೇ ಮಾಹಿತಿ ಮಾರ್ಗದರ್ಶನ. ಜವಾಬ್ದಾರಿಯುತ ನಡವಳಿಕೆಗೆ ಉತ್ತೇಜನ ಕೊಡಬೇಕು. ಅಂದರೆ ಎಸ್.ಒ.ಪಿ. ಕಡ್ಡಾಯ ಜಾರಿ.

# ಕನಕದಾಸರ ಸಾಹಿತ್ಯ ಮತ್ತು ಬದುಕು ವಿಶ್ವಕ್ಕೆ ಮಾದರಿ

**"ಕನಕದಾಸರು ಮೂಲತಃ ಮಾಂಡಲೀಕರು. ಅವರಿಗೆ ಕ್ರಮಬದ್ಧವಾದ ವಿದ್ಯೆ ದೊರಕಿತ್ತು. ಅವರು ಕನ್ನಡ, ಸಂಸ್ಕೃತ ಮತ್ತು ತಮಿಳು ಭಾಷೆಗಳಲ್ಲಿ ಶ್ರೇಷ್ಠ ವಿದ್ವಾಂಸರಾಗಿದ್ದರು. ತಮ್ಮ ಸಮಕಾಲೀನ ಮಾಧ್ವಪಂಥದ ಯತಿ ಶ್ರೀವಾದಿರಾಜರ ಮಿತ್ರರಾಗಿದ್ದರು. ಕನಕದಾಸರು ಕನ್ನಡ ಭಾಷೆಯಲ್ಲಿ ಮಹಾಕವಿ ಮತ್ತು ದಾರ್ಶನಿಕರಾಗುವ ಎಲ್ಲಾ ಅರ್ಹತೆ ಪಡೆದಿದ್ದರು...."**

ಶ್ರೀ ಕನಕದಾಸರ ಸಾಹಿತ್ಯ, ತತ್ವ, ಮೌಲ್ಯ ಮತ್ತು ಅದರ ಸಿಹಿಹೂರಣ ವಿಶ್ವಕ್ಕೆ ಮಾದರಿ, ಅನುಕರಣೀಯ ಎಂದು ತುಮಕೂರು ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ. ಎಂ. ಆರ್. ಹುಲಿನಾಯ್ಕರ್ ಪ್ರತಿಪಾದಿಸಿದ್ದಾರೆ. ಬೆಂಗಳೂರಿನ ನಾಗರಬಾವಿ ಬಡಾವಣೆಯಲ್ಲಿ ಮೇ 18 ಭಾನುವಾರ ಕನಕದಾಸ ಸಾಹಿತ್ಯ ಪ್ರಚಾರ ಸಮಿತಿ ಬೆಂಗಳೂರು ಹಮ್ಮಿಕೊಂಡಿದ್ದ ಶ್ರೀ ಕನಕ ಸಾಹಿತ್ಯ ಸಂವತ್ಸರ–2025 ಸಮಾರೋಪ ಕಾರ್ಯಕ್ರಮದಲ್ಲಿ ಅವರು ಒಟ್ಟಾರೆ ಹೇಳಿದಿಷ್ಟು :

ಬೆಂಗಳೂರು ಮಿನಿ ಭಾರತವಾಗಿ ಪರಿವರ್ತನೆಯಾಗಿದೆ. ವಿಶ್ವದ ಎಲ್ಲ ಸಂಸ್ಕೃತಿಯ ತಿರುಳು ಮತ್ತು ಹೂರಣವನ್ನು ಇಲ್ಲಿ ಕಾಣಬಹುದು. ಇಂತಹ ಬೆಂಗಳೂರಿನಲ್ಲಿ ಕನಕ ಸಾಹಿತ್ಯ ಮತ್ತು ಬದುಕಿನ ಸಾರ ಹಾಗೂ ಮೌಲ್ಯವನ್ನು ಪರಿಚಯಮಾಡಿಕೊಡುವ ಪ್ರಯತ್ನ ಸ್ವಾಗತ, ಸಕಾಲಿಕ. ಕನಕದಾಸರ ಸಾಹಿತ್ಯವನ್ನು ಬೆಂಗಳೂರಿನ ಎಲ್ಲ ಬಡಾವಣೆಗಳಲ್ಲಿ ಹಮ್ಮಿಕೊಂಡು ವಿವಿಧ ಸಮುದಾಯಗಳಿಗೆ ತಲುಪಿಸುವ ಕೆಲಸ ಜರೂರಾಗಿ ಆಗಬೇಕಾಗಿದೆ. ಕನಕದಾಸರ ಸಾಹಿತ್ಯದ ತತ್ವ, ಆದರ್ಶ ಬದುಕಿನ ಶ್ರೇಷ್ಠಮೌಲ್ಯ ಒಂದು ಸಮುದಾಯಕ್ಕೆ ಮೀಸಲಾದರೆ ಅದು ಅವರಿಗೆ ಮಾಡುವ ಅಪಚಾರವಾಗಲಿದೆ. ಕಾರಣವಿಷ್ಟೆ ಕನಕದಾಸರ ಸಾಹಿತ್ಯಕ್ಕೆ ಯುಗಧರ್ಮವನ್ನು ಮೀರಿ ಬೆಳೆಯುವ ಶಕ್ತಿಯಿದೆ ಎಂಬುದನ್ನು ಮರೆಯಬಾರದು.

ಮೊದಲಿಗೆ ಕನಕದಾಸರ ಬದುಕು ಮತ್ತು ಸಾಹಿತ್ಯವನ್ನು ಕಟ್ಟುಕತೆಗಳಿಂದ ಬೇರ್ಪಡಿಸಬೇಕು. ಕನಕದಾಸರಿಗೆಗೆ ಶ್ರೀವ್ಯಾಸರಾಯರ ಕೃಪೆ ದೊರೆತ ಕಾರಣ ಅವರು ಮಹಾನ್ ವ್ಯಕ್ತಿಯಾದ ಎನ್ನುವುದು ಕಟ್ಟುಕತೆ. ವೈಷ್ಣವ ಧರ್ಮದ ಪ್ರಚಾರಕರು ಕಟ್ಟಿದ ಕತೆಯಿದು. ಕನಕದಾಸರು ಮೂಲತಃ ಮಾಂಡಲೀಕರು. ಅವರಿಗೆ ಕ್ರಮಬದ್ಧವಾದ ವಿದ್ಯೆ ದೊರಕಿತ್ತು. ಅವರು ಕನ್ನಡ, ಸಂಸ್ಕೃತ ಮತ್ತು ತಮಿಳು ಭಾಷೆಗಳಲ್ಲಿ ಶ್ರೇಷ್ಠ ವಿದ್ವಾಂಸರಾಗಿದ್ದರು. ತಮ್ಮ ಸಮಕಾಲೀನ ಮಾಧ್ವಪಂಥದ ಯತಿ ಶ್ರೀವಾದಿರಾಜರ ಮಿತ್ರರಾಗಿದ್ದರು. ಕನಕದಾಸರು ಕನ್ನಡ ಭಾಷೆಯಲ್ಲಿ ಮಹಾಕವಿ ಮತ್ತು ದಾರ್ಶನಿಕರಾಗುವ ಎಲ್ಲಾ ಅರ್ಹತೆ ಪಡೆದಿದ್ದರು. ಅವರ ಗುರುಗಳ ಮಾಧ್ವಸಿದ್ಧಾಂತ 'ಜೀವ ಜೀವರಲ್ಲಿ ಭೇದ' ಎನ್ನುತ್ತದೆ. ಕನಕದಾಸರು 'ಕುಲ ಕುಲ ಕುಲವೆಂದು ಹೊಡೆದಾಡದಿರಿ' ಎನ್ನುವ ಮೂಲಕ ಮನುಷ್ಯರೆಲ್ಲರೂ ಒಂದೇ ಕುಲದವರು, ಜಗತ್ತಿನಲ್ಲಿ ಮಾನವ ಧರ್ಮವೇ ಅತಿ ಶ್ರೇಷ್ಠ ಎಂದು ಸಾರಿದರು, ಅಸ್ಪೃಶ್ಯರಿಗೂ ನ್ಯಾಯ ದೊರಕಿಸಿ ಕೊಟ್ಟ ಶ್ರೀರಾಮಾನುಜಾಚಾರ್ಯರ ಶ್ರೀವೈಷ್ಣವ ಸಿದ್ಧಾಂತಕ್ಕೆ ಮತಾಂತರಗೊಂಡವರು. ವಿಜಯನಗರದ ಕಾಲದಲ್ಲಿ ಕುರುಬ ಸಮಾಜ ಆಡಳಿತದ ಕೇಂದ್ರ ಸಮುದಾಯವಾಗಿತ್ತು. ಇಂತಹ ತಾತ್ವಿಕ ಹಿನ್ನೆಲೆಯ ಕುರುಬ ಸಮಾಜಕ್ಕೆ ಹೋರಾಟದ ಮನೋಭಾವ ಶತಶತಮಾನಗಳಿಂದಲೂ ರಕ್ತಗತವಾಗಿ ಬಂದಿದೆ ಎಂಬುದಕ್ಕೆ ಕನಕದಾಸರು, ಸಂಗೊಳ್ಳಿ ರಾಯಣ್ಣ, ಅಹಲ್ಯಾಬಾಯಿ ಹೋಲ್ಕರ್ ಸಾಕ್ಷಿಯಾಗಿದ್ದಾರೆ.

ಸಾಹಿತ್ಯ ಬದುಕಿನ ಅಂಗ ಎಂಬುದನ್ನು ನೆನಪಿನಲ್ಲಿಟ್ಟುಕೊಂಡರೆ ಸಾಹಿತ್ಯದ ಜೊತೆಗೆ ಕುರುಬ ಸಮುದಾಯದ ಭವಿಷ್ಯ ರೂಪಿಸಲು ಅನುಕೂಲವಾಗುತ್ತದೆ. ಬೆಳಗಾವಿ ಜಿಲ್ಲೆಯ ನಿಪ್ಪಾಣಿ, ಕೊಳ್ಳೇಗಾಲ, ಕೆ.ಆರ್. ನಗರ ಮೊದಲಾದ ಕಡೆಗಳಿಂದ ನಮ್ಮ ಸಮುದಾಯದ ಯುವಜನಾಂಗ ಬೆಂಗಳೂರಿಗೆ ಹೆಚ್ಚಾಗಿ ಬರುತ್ತಾರೆ. ಅವರಿಗೆ ಬೇಕಾದ ಮಾಹಿತಿ ಒದಗಿಸಲು ರಾಜಧಾನಿಯಲ್ಲಿ 'ಕುರುಬ ಯುಜನಾಂಗ ಬೆಳವಣಿಗೆ ಮಾಹಿತಿ ಕೇಂದ್ರ' ಸ್ಥಾಪನೆಯಾಗಬೇಕು. ಸಮುದಾಯಕ್ಕೆ ಸಂಬಂಧಪಟ್ಟ ಎಲ್ಲ ಮಾಹಿತಿಯನ್ನು ನಾವೇ ಕಾಲಕಾಲಕ್ಕೆ ಸಂಗ್ರಹಿಸಿಬೇಕು. ಅಗತ್ಯವಾದರೆ ಸರ್ಕಾರಕ್ಕೆ ಅಂಕಿ–ಅಂಶಗಳನ್ನು ತಿಳಿಸಿಕೊಡುವಷ್ಟು ವೈಜ್ಞಾನಿಕವಾಗಿ ನಮ್ಮ ಸಮೀಕ್ಷೆ ನಡೆಯುವ ಅಗತ್ಯವಿದೆ.

ಕನಕದಾಸರು ಭಾರತೀಯ ಸಂಸ್ಕೃತಿಗೆ ಅಂದರೆ ಭಕ್ತಿಪಂಥದ ವಿಕಾಸಕ್ಕೆ ವಿಶೇಷ ಕೊಡುಗೆ ನೀಡಿದ್ದಾರೆ. ಅಪಾರ ಸಂಖ್ಯೆಯ ಕುರುಬ ಸಮುದಾಯ ವೈಷ್ಣವ ಸಿದ್ಧಾಂತಕ್ಕೆ ವಾಲಿದ್ದಾರೆ. ಭಕ್ತಿ ಪಂಥದಲ್ಲಿ ವ್ಯಕ್ತಿಯ ಸಾಧನೆಗೆ ಬಹಳ ಮಹತ್ವವಿದೆ. ಕನಕದಾಸರ ಸಾಹಿತ್ಯ ಪ್ರಚಾರ ಸಮಿತಿ ರಾಜ್ಯದ ಎಲ್ಲ ತಾಲೂಕು ಕೇಂದ್ರಗಳಲ್ಲಿ ತನ್ನ ಘಟಕ ಸ್ಥಾಪಿಸಿ, ಜಿಲ್ಲಾ ಕೇಂದ್ರಗಳಲ್ಲಿ ಸಮಾವೇಶ ಏರ್ಪಡಿಸಬೇಕಿದೆ ಎಂದು ಡಾ. ಹುಲಿನಾಯ್ಕರ್ ಅಭಿಪ್ರಾಯಪಟ್ಟರು.

ಸಮಾರಂಭದಲ್ಲಿ ಪರಮಪೂಜ್ಯ ಶ್ರೀ ಸ್ವಾಮಿ ಯೋಗೇಶ್ವರಾನಂದ ಮಹಾಸ್ವಾಮಿ, ಶ್ರೀ ಈಶ್ವರಾನಂದ ಪುರಿ, ಶ್ರೀ ಬಸವರಾಜ ಪಟ್ಟದದೇವರು, ಹಾಗೂ ಸಮುದಾಯದ ಶಿಕ್ಷಣತಜ್ಞರು, ಸಾಹಿತಿಗಳು, ಸಮಾಜಸೇವಕರು, ಸೇರಿದಂತೆ ಅನೇಕ ಗಣ್ಯರು ಭಾಗಿಯಾಗಿದ್ದರು.




**ಬೆಂಗಳೂರಿನ ಚಂದ್ರಲೇಔಟ್‌ನಲ್ಲಿ ನಡೆದ ಶ್ರೀ ಕನಕ ಸಾಹಿತ್ಯ ಸಂವತ್ಸರ 2024 2025ರಲ್ಲಿ ನಡೆದ ಸನ್ಮಾನ ಸಮಾರಂಭ. ಎಡೆಗಡೆಯಿಂದ ಪಂಡಿತ ಕುಮಾರದಾಸ್ ಹಿಂದೂಸ್ತಾನಿ ಸಂಗೀತಗಾರರು, ಡಾ. ಎಂ. ಆರ್. ಹುಲಿನಾಯ್ಕರ್, ಶಿಕ್ಷಣತಜ್ಞರು ಮತ್ತು ಖ್ಯಾತ ಸರ್ಜನ್, ಸುನಿಲ್ ಜಯರಾಮ್ ಎಂ.ಡಿ., ಆರ್. ಆರ್. ಇಂಜಿನಿಯರಿಂಗ್ ಕಾಲೇಜು, ವಿನಯಕುಮಾರ್, ಸಂಸ್ಥಾಪಕರು ಇನ್‌ಸ್ಟೂಟ್ ಆಫ್ ಐ.ಎ.ಎಸ್. ಅಕಾಡೆಮಿ, ಎಸ್.ಬಿ. ಪ್ರಶಾಂತ್ ಮತ್ತು ಡಾ ಸುರೇಖಾ ಕಣ್ಣಿನ ವೈದ್ಯರು ಮತ್ತು ನಯೋನಿಕ ಐ ಕೇರ್ ಟ್ರಸ್ಟ್‌ನ ಸಂಸ್ಥಾಪಕರು.**

## ಪದವಿ ವಿದ್ಯಾರ್ಥಿಗಳಿಗಾಗಿ ಬಿಜ್‌ಕ್ವಿಜ್ ಸ್ಪರ್ಧೆ

# ರಸಪ್ರಶ್ನೆಗಳ ಮೂಲಕ ಜ್ಞಾನವೃದ್ಧಿ ಸಾಧ್ಯ

"ವಿದ್ಯಾರ್ಥಿಗಳ ಬೌದ್ಧಿಕ ಜ್ಞಾನವೃದ್ಧಿಗೆ ರಸಪ್ರಶ್ನೆ ಕಾರ್ಯಕ್ರಮಗಳು ಸಹಕಾರಿಯಾಗುತ್ತವೆ. ಎಲ್ಲಾ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆಯಲು ಅಧ್ಯಯನ ವಿಷಯಗಳನ್ನು ಕ್ವಿಜ್‌ಪ್ರಶ್ನೆಗಳ ಮಾದರಿಯಲ್ಲಿ ಸಿದ್ಧಮಾಡಿಕೊಳ್ಳಬೇಕು. ಆ ರೀತಿ ಮಾಡಿಕೊಂಡಿದ್ದರೆ ಮಾತ್ರ ಉತ್ತಮ ಜ್ಞಾನವನ್ನು ಪಡೆದುಕೊಳ್ಳಬಹುದು. ವಿದ್ಯಾಭ್ಯಾಸದ ನಂತರ ತೆಗೆದುಕೊಳ್ಳುವ ಐ.ಎ.ಎಸ್, ಐ.ಪಿ.ಎಸ್, ಕೆ.ಎ.ಎಸ್ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಈ ತಯಾರಿ ಪ್ರಯೋಜನಕ್ಕೆ ಬರುತ್ತದೆ" ಎಂದು ತುಮಕೂರು ವಿಶ್ವವಿದ್ಯಾಲಯದ ಕಲಾ ಕಾಲೇಜಿನ ಪ್ರಾಂಶುಪಾಲರಾದ ಡಾ. ದಾಕ್ಷಾಯಿಣಿ ಅವರು ತಿಳಿಸಿದರು.

ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯದ ಎಂ.ಬಿ.ಎ. ಮತ್ತು ಎಂ.ಸಿ.ಎ. ವಿಭಾಗದ ವತಿಯಿಂದ ಪದವಿ ವಿದ್ಯಾರ್ಥಿಗಳಿಗಾಗಿ ಬಿಜ್‌ಕ್ವಿಜ್ 2025 ರಸಪ್ರಶ್ನೆ ಸ್ಪರ್ಧೆಯನ್ನು ಜೂನ್ 17 ರಂದು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಡಾ. ದಾಕ್ಷಾಯಿಣಿ ಅವರು "ವಿದ್ಯಾರ್ಥಿಗಳು ಅನ್ಯ ಆಸಕ್ತಿಗಳಿಗೆ ಆಕರ್ಷಿತವಾಗದೆ ಕಲಿಕೆಯನ್ನೇ ತಮ್ಮ ಗುರಿಯಾಗಿಸಿಕೊಳ್ಳಬೇಕು' ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ಮತ್ತು ಮಾಹಿತಿ ತಂತ್ರಜ್ಞಾನ ನಿರ್ದೇಶಕರಾದ ಎಂ.ಎಸ್. ಪಾಟೀಲ್ ಅವರು "ಇಂದು ತಂತ್ರಜ್ಞಾನವು ಜಗತ್ತನ್ನು ಕಿರಿದು ಮಾಡಿದೆ. ಅಮೆರಿಕಾ ಸೇರಿದಂತೆ ಜಗತ್ತಿನ ಯಾವುದೇ ದೇಶದಲ್ಲಿರುವ ವ್ಯಕ್ತಿಯೂ ಕ್ಷಣದಲ್ಲಿ ಭಾರತದ ಯಾವುದೇ ವ್ಯಕ್ತಿಯೊಂದಿಗೆ ಸಂಪರ್ಕ ಸಾಧಿಸಿ ಮಾತುಕತೆ ನಡೆಸಬಹುದಾಗಿದೆ. ಈ ತಾಂತ್ರಿಕ ಬೆಳವಣಿಗೆಗೆ ತಕ್ಕಂತೆ ವಿದ್ಯಾರ್ಥಿಗಳು ತಮ್ಮ ವೃತ್ತಿಜೀವನಕ್ಕೆ ಸಜ್ಜಾಗಬೇಕು" ಎಂದರು.

ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ನರೇಂದ್ರವಿಶ್ವನಾಥ್ ಅವರು "ವಿದ್ಯಾರ್ಥಿಗಳು ಮುಂದೆ ಉದ್ಯೋಗ ಆಯ್ಕೆ ಮಾಡಿಕೊಂಡು, ವೃತ್ತಿಯಲ್ಲಿ ಯಶಸ್ವಿಯಾಗಲು ದೇಶ–ವಿದೇಶಗಳ ಕಂಪನಿಗಳ ವ್ಯಾಪಾರ–ವಹಿವಾಟನ್ನು ಅರ್ಥ ಮಾಡಿಕೊಳ್ಳುವುದು ಬಹಳ ಮುಖ್ಯವಾಗುತ್ತದೆ. ಜಗತ್ತಿನಲ್ಲಿರುವ ಮುಂಚೂಣಿ ಕಂಪನಿಗಳು ಯಾವ ವಿಧದಲ್ಲಿ ವ್ಯಾಪಾರ–ವಹಿವಾಟು ಕ್ರಮ ಅನುಸರಿಸುತ್ತಿವೆ ಎನ್ನವುದನ್ನು ಪಠ್ಯಕ್ರಮದಿಂದ ಕಲಿಯಲು ಸಾಧ್ಯವಿಲ್ಲ. ಇಂತಹ ರಸಪ್ರಶ್ನೆ ಸ್ಪರ್ಧೆಯ ಕಾರ್ಯಕ್ರಮಗಳು ಅಂತಹ ಕಲಿಕೆಗೆಗೆ ಅವಕಾಶ ಮಾಡಿಕೊಡುತ್ತದೆ" ಎಂದರು.

ಶ್ರೀದೇವಿ ಎಂ.ಬಿ.ಎ. ವಿಭಾಗದ ಮುಖ್ಯಸ್ಥರಾದ ಡಾ. ಕೆ.ಎಸ್. ರಾಮಕೃಷ್ಣ ಅವರು 'ಈ ರಸಪ್ರಶ್ನೆ ಕಾರ್ಯಕ್ರಮದಲ್ಲಿ ತುಮಕೂರು ಜಿಲ್ಲೆ ಹಾಗೂ ಇತರೆ ಜಿಲ್ಲೆಗಳಿಂದ ಇಪ್ಪತ್ತೈದಕ್ಕೂ ಹೆಚ್ಚು ಪದವಿ ಕಾಲೇಜುಗಳಿಂದ ಪ್ರತಿ ಕಾಲೇಜಿನಿಂದ ತಲಾ ಇಬ್ಬರು ವಿದ್ಯಾರ್ಥಿಗಳಂತೆ ಸುಮಾರು ನೂರು ತಂಡಗಳು ಭಾಗವಹಿಸಿವೆ" ಎಂದರು.

ಪ್ರಥಮ ಬಹುಮಾನವನ್ನು ಪಡೆದ ತುಮಕೂರು ವಿಶ್ವವಿದ್ಯಾಲಯದ ಕಲಾ ಕಾಲೇಜಿನ ವಿದ್ಯಾರ್ಥಿಗಳಾದ ಡಿ.ಜೆ ಚಿಂತನ್ ಮತ್ತು ಮುಕುಂದರೆಡ್ಡಿ ಅವರಿಗೆ ಹತ್ತುಸಾವಿರ ರೂ ನಗದನ್ನು, ಎರಡನೆಯ ಬಹುಮಾನವನ್ನು ಪಡೆದ ಮಧುಗಿರಿಯ ಶ್ರೀರಾಘವೇಂದ್ರ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಾದ ಎಸ್. ಕಿರಣ್ ಮತ್ತು ನವ್ಯ ಬಿ.ಎ. ಅವರಿಗೆ ಐದು ಸಾವಿರ ರೂ. ನಗದನ್ನು ಮತ್ತು ಮೂರನೆಯ ಬಹುಮಾನವನ್ನು ಪಡೆದ ತುಮಕೂರಿನ ವರದರಾಜ ಪ್ರಥಮ ದರ್ಜೆ ಕಾಲೇಜಿನ ಹೆಚ್.ಎಸ್ ಲಕ್ಷ್ಮೀಶ್ ಮತ್ತು ಅಜ್ರಾರವರಿಗೆ ಮೂರು ಸಾವಿರ ರೂ ನಗದನ್ನು ನೀಡಲಾಯಿತು.

ಮುಕ್ತಾಯ ಸಮಾರಂಭದಲ್ಲಿ ಭಾಗವಹಿಸಿದ್ದ ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಅವರು ಬಹುಮಾನವನ್ನು ಪಡೆದ ಎಲ್ಲಾ ವಿಜೇತರಿಗೆ ಹಾಗೂ ಸ್ಪರ್ಧೆಗಳಲ್ಲಿ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ತುಮಕೂರು ವಿಶ್ವವಿದ್ಯಾಲಯದ ಕಲಾ ಕಾಲೇಜಿನ ಪ್ರಾಂಶುಪಾಲ ಡಾ. ದಾಕ್ಷಾಯಿಣಿ ಅವರನ್ನು ಸನ್ಮಾನಿಸಲಾಯಿತು.




**ಚಿತ್ರದಲ್ಲಿ ತುಮಕೂರು ವಿಶ್ವವಿದ್ಯಾಲಯದ ಕಲಾ ಕಾಲೇಜಿನ ಪ್ರಾಂಶುಪಾಲೆ ಡಾ. ದಾಕ್ಷಾಯಿಣಿ, ಎಂ.ಎಸ್. ಪಾಟೀಲ್, ಡಾ. ನರೇಂದ್ರವಿಶ್ವನಾಥ್, ಡಾ .ಕೆ.ಎಸ್. ರಾಮಕೃಷ್ಣ, ಡಾ. ಬಿ.ಎನ್. ಪ್ರತಾಪ್, ಡಾ. ಗ್ರೇಸ್ ಹೇಮಲತಾ, ಪ್ರೊ. ಟಿ.ಎಂ. ಪ್ರವೀಣ್‌ಕುಮಾರ್, ಪ್ರೊ. ಆರ್. ಬಿಂದು, ಪ್ರೊ. ಎಸ್. ದಿವ್ಯಾ, ಹಾಗೂ, ಪ್ರೊ. ಆರ್. ಕಾವ್ಯ.**

Printed and Published by **Shridevi Media Center,** Lingapura, NH 4, Sira Road, Tumakuru - 572106, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor: **Dr M R Hulinaykar**